ಉಪನ್ಯಾಸ ಗ್ರಂಥಮಾಲೆ

೩೩೫

ಬದಲಾಗುತ್ತಿರುವ ಭಾರತೀಯ ಗ್ರಾಮ

ಎಚ್. ವಿ. ನಾಗೇಶ್

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ

ಡಿಸೆಂಬರ ೧೯೭೩

ಉಪನ್ಯಾಸ ಗ್ರಂಥ ಮಾಲೆ

೩೩೫

ಬದಲಾಗುತ್ತಿರುವ ಭಾರತೀಯ ಗ್ರಾಮ

ಎಚ್. ವಿ. ನಾಗೇಶ್

ಪ್ರಸಾರಾಂಗ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೧೯೬೭

ಪ್ರಕಾಶಕರು :

ಸಿ. ಎಸ್. ಕಣವಿ

ನಿರ್ದೇಶಕರು, ಪ್ರಸಾರಾಂಗ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ - ೫೮೦೦೦೩

ಪ್ರಥಮ ಮುದ್ರಣ : ೫,೦೦೦ ಪ್ರತಿಗಳು

ಡಿಶಂಬರ, ೧೯೮೨

ಬೆಲೆ : ೫೦ ಪೈಸೆ

ಮುದ್ರಕರು :

ಅಶೋಕ ಎಲ್. ಆಕಳವಾಡಿ

ವಾಸವಿ ಪ್ರಿಂಟರ್ಸ

ಬ್ಯಾಂಕ ರೋಡ, ಧಾರವಾಡ

ಮುನ್ನುಡಿ

ಕರ್ನಾಟಕ ವಿಶ್ವವಿದ್ಯಾಲಯವು ತನ್ನ ಪ್ರಸಾರಾಂಗದ ಮುಖಾಂತರ ಕೈಕೊಂಡು ನಡೆಸುತ್ತಿರುವ ಜ್ಞಾನಪ್ರಸಾರದ ಯೋಜನೆಗಳಲ್ಲಿ ಈ 'ಉಪನ್ಯಾಸ ಗ್ರಂಥಮಾಲೆ' ಅತ್ಯಂತ ಮುಖ್ಯವೂ, ಜನಪ್ರಿಯವೂ ಆಗಿರುವುದು ಹೆಮ್ಮೆಯ ಮಾತಾಗಿದೆ. ವಿಶ್ವವಿದ್ಯಾಲಯದ ಆಡಳಿತ ಕ್ಷೇತ್ರದಲ್ಲಿರುವ ನಾಲ್ಕು ಜಿಲ್ಲೆಗಳಲ್ಲಿಯೂ ಉಪನ್ಯಾಸ ಶಿಬಿರಗಳನ್ನು ಏರ್ಪಡಿಸಲಾಗುತ್ತಿದ್ದು, ವಿಶ್ವವಿದ್ಯಾಲಯದ ಮತ್ತು ಇದಕ್ಕೆ ಸೇರಿದ ಕಾಲೇಜುಗಳ ಪ್ರಾಧ್ಯಾಪಕರು ಸಾಹಿತ್ಯ, ವಿಜ್ಞಾನ, ಸಾಮಾಜಿಕಶಾಸ್ತ್ರ ಮೊದಲಾದ ಶಾಖೆಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಆಯ್ದುಕೊಂಡು, ಶಾಸ್ತ್ರಸಮ್ಮತವಾದ ಸರಣಿಯಲ್ಲಿ, ಜನಸಾಮಾನ್ಯರಿಗೆ ತಿಳಿಯುವ ಶೈಲಿಯಲ್ಲಿ ಈ ಶಿಬಿರಗಳಲ್ಲಿ ಉಪನ್ಯಾಸಗಳನ್ನು ಕೊಡುತ್ತಾರೆ. ವಿಶ್ವವಿದ್ಯಾಲಯದ ಜ್ಞಾನಭಂಡಾರದ ಅಲ್ಪಾಂಶವನ್ನಾದರೂ ಮಹಾಜನರ ಮನೆ ಬಾಗಿಲಿಗೆ ಒಯ್ದು ಮುಟ್ಟಿಸಬೇಕೆಂದು ಮಾಡಿದ ಈ ಪ್ರಯತ್ನಕ್ಕೆ ನಮ್ಮ ನಿರೀಕ್ಷೆಗೆ ಮೀರಿದ ಮೆಚ್ಚಿಕೆಯೂ, ಪ್ರೋತ್ಸಾಹವೂ ದೊರೆಯುತ್ತಿವೆ. ಜನರು ತಾವಾಗಿಯೇ ಮುಂದೆ ಬಂದು ತಮ್ಮ ತಮ್ಮ ಊರುಗಳಲ್ಲಿ ಈ ಉಪನ್ಯಾಸಗಳನ್ನು ಏರ್ಪಡಿಸಲು ವಿಶ್ವವಿದ್ಯಾಲಯಕ್ಕೆ ಬರೆದು ಬಿನ್ನವಿಸಿಕೊಳ್ಳುತ್ತಿರುವುದು ನಿಜವಾಗಿಯೂ ಸಂತೋಷದ ಸಂಗತಿಯಾಗಿದೆ.

ಈ ಜ್ಞಾನಪ್ರಸಾರ ಕಾರ್ಯದಲ್ಲಿ ಭಾಗವಹಿಸುವದರಿಂದ ವಿಶ್ವವಿದ್ಯಾಲಯದ ಹಾಗೂ ಕಾಲೇಜುಗಳ ಅಧ್ಯಾಪಕರಿಗೆ

ಆಯಾ ಪ್ರದೇಶದ ಜನತೆಯೊಡನೆ ಹೆಚ್ಚಿನ ಸಂಪರ್ಕ ಒದಗುವ ದಲ್ಲದೆ ಎಂತಹ ವಿಷಯವನ್ನಾದರೂ ಕನ್ನಡದಲ್ಲಿ ತಿಳಿಸಿ ಹೇಳುವ ಹಾಗೂ ಅದನ್ನು ಸುಲಭ ಶೈಲಿಯಲ್ಲಿ ಬರವಣಿಗೆಯಲ್ಲಿಳಿಸುವ ಅವಕಾಶ ದೊರೆಯುತ್ತದೆ. ಈ ಕಾರ್ಯದಲ್ಲಿ ಅವರೆಲ್ಲರೂ ಮನ ಮುಟ್ಟಿ ಸಹಕರಿಸುತ್ತಿರುವುದು ಶ್ಲಾಘನೀಯ.

ಈ ಮಾಲೆಯಲ್ಲಿ ಈಗಾಗಲೇ ೩೩೪ ಪುಸ್ತಕಗಳು ಪ್ರಕಟ ವಾಗಿವೆ. ಅವು ಅಚ್ಚಾಗಿ ಹೊರಬಂದೊಡನೆ ಅವುಗಳ ಸಾವಿರಾರು ಪ್ರತಿಗಳನ್ನು ಜನರು ಕೊಂಡು ಓದುತ್ತಾರೆ. ಅನೇಕ ಪುಸ್ತಕ ಗಳು ನಾಲ್ಕು ಐದು ಮುದ್ರಣಗಳನ್ನು ಕಂಡಿರುವುದು ಈ ಮಾಲೆಯ ಉಪಯುಕ್ತತೆಯನ್ನೂ, ಜನಪ್ರಿಯತೆಯನ್ನೂ ವ್ಯಕ್ತ ಗೊಳಿಸುತ್ತದೆ. ಇದು ನಾಡಿನ ಪ್ರಗತಿಯ ಚಿಹ್ನೆಯೆಂದು ಭಾವಿ ಸುತ್ತೇನೆ.

ವಿಶ್ವವಿದ್ಯಾಲಯದ ಈ ಸೇವೆಯ ಸಂಪೂರ್ಣ ಪ್ರಯೋ ಜನ ಪಡೆದು ಸಾಮಾನ್ಯ ಜನತೆ ನಾಡಿನ ಸರ್ವತೋಮುಖ ಪ್ರಗತಿಯಲ್ಲಿ ಪಾಲುಗೊಳ್ಳಲೆಂದು ಹಾರೈಸುತ್ತೇನೆ.

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ

ಡಿ. ಎಂ. ನಂಜುಂಡಪ್ಪ
ಕುಲಪತಿಗಳು

ಕೃತಜ್ಞತೆಗಳು

ಕರ್ನಾಟಕ ವಿಶ್ವವಿದ್ಯಾಲಯ ಪ್ರಸಾರಾಂಗದ ಆಶ್ರಯದಲ್ಲಿ ನಾನು ಬಾದಾಮಿ ತಾಲೂಕಿನ ಕೆರೂರಿನಲ್ಲಿ ಮಾಡಿದ ಉಪನ್ಯಾಸದ ವಿಸ್ತೃತ ರೂಪವೇ ಈ ಚಿಕ್ಕ ಪುಸ್ತಿಕೆ. ಅಂದಿನ ಉಪನ್ಯಾಸ ಕೇಳುತ್ತಿದ್ದ ಜನರಿಗೆ ಈ ಬದಲಾಗುತ್ತಿರುವ ಗ್ರಾಮದ ಸಮಸ್ಯೆಗಳ ಬಗ್ಗೆ ಸಾಕಷ್ಟು ಅರಿವು ಇತ್ತು ಎಂಬುದನ್ನು ಅವರ ಮುಖದಲ್ಲಿ ನಾನು ಕಂಡುಕೊಂಡಿದ್ದೇನೆ. ಗ್ರಾಮೋದ್ಧಾರದ ಹೆಸರಿನಲ್ಲಿ ನಡೆಯುತ್ತಿರುವ ತೇಪೆ ಮುಚ್ಚುವ ಕಾರ್ಯವನ್ನು ನಾನು ಅಂದು ಟೀಕಿಸಿದೆ. ಆದರೆ ಆ ಗ್ರಾಮಸ್ಥರು ನನಗಿಂತ ಒಂದು ಹೆಜ್ಜೆ ಮುಂದಿದ್ದರು. ಅವರಲ್ಲಿ ಹೆಚ್ಚು ಸುಶಿಕ್ಷಿತರಾದ ಕೆಲವರು ತಮ್ಮ ಪ್ರತಿಕ್ರಿಯೆಯನ್ನು ಪತ್ರಗಳಲ್ಲಿ ಬರೆದಿದ್ದಾರೆ. ಗ್ರಾಮೀಣ ಬದಲಾವಣೆಯ ಬಗ್ಗೆ ಕಳಕಳಿ ತೋರಿಸಿದ್ದಾರೆ. ಒಟ್ಟಿನಲ್ಲಿ ಉಪನ್ಯಾಸದ ವಿಷಯ ಅವರ ಬದುಕಿಗೆ ಬಹಳ ಹತ್ತಿರದ್ದು ಹಾಗೂ ಮಹತ್ವದ್ದು ಎಂಬುದನ್ನು ನಾನು ಕಂಡುಕೊಂಡೆ.

ಪ್ರಕಟನೆಯ ಈ ಸಂದರ್ಭದಲ್ಲಿ ನಾನು ಪ್ರಸಾರಾಂಗದ ನಿರ್ದೇಶಕರಾದ ಶ್ರೀ ಚೆನ್ನವೀರ ಕಣವಿ ಅವರಿಗೂ, ಅವರ ಸಹೋದ್ಯೋಗಿಗಳೂ, ನನ್ನ ಮಿತ್ರರೂ ಆದ ಉಪ ನಿರ್ದೇಶಕ ಶ್ರೀ ಎಸ್. ಬಿ. ನಾಯಕ ಮತ್ತು ಸಹಾಯಕ ನಿರ್ದೇಶಕ ಶ್ರೀ ಎಲ್. ಎಂ. ಗುಡ್ಡೀನ ಅವರಿಗೂ ನನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಜೆ.ಎಸ್.ಎಸ್. ಕಾಲೇಜು **ಎಚ್. ವಿ. ನಾಗೇಶ್**
ಧಾರವಾಡ

ಪರಿವಿಡಿ

	ಮುನ್ನುಡಿ	III
	ಕೃತಜ್ಞತೆಗಳು	V
೧.	ಪೀಠಿಕೆ	೧
೨.	ಗ್ರಾಮೀಣ ಬದಲಾವಣೆ-ಸ್ಥೂಲನೋಟ	೬
೩.	ಬದಲಾವಣೆಯ ಪ್ರೇರಣೆಗಳು ಹಾಗೂ ಪ್ರಯತ್ನಗಳು	೨೧
೪.	ಬದಲಾವಣೆಯ ಲಾಭ-ನಷ್ಟಗಳು, ಸಮಸ್ಯೆಗಳು	೩೦
೫.	ಭಾರತೀಯ ಗ್ರಾಮದ ಭವಿಷ್ಯ	೪೫
	ಗ್ರಂಥ ಋಣ	೪೮

೧. ಪೀಠಿಕೆ

ಭಾರತೀಯ ಗ್ರಾಮಗಳು ನಮಗೆ ತಿಳಿದಷ್ಟು ಮಟ್ಟಿಗೆ ಸುಮಾರು ಎಂಟುಸಾವಿರ ವರ್ಷಗಳಿಗಿಂತ ಹೆಚ್ಚು ಪ್ರಾಚೀನವಾಗಿವೆ. ಈ ಎಂಟು ಸಾವಿರ ವರ್ಷಗಳಲ್ಲಿ ಅವು ಬದಲಾಗದೇ ಉಳಿದಿವೆ ಎಂದು ಹೇಳುವುದಂತೂ ದಾರ್ಷ್ಟ್ಯದ ಮಾತು. ಕೆಲವರ ಅಭಿಪ್ರಾಯದಂತೆ ಭಾರತದ ಗ್ರಾಮಗಳು ಸಹಸ್ರಾರು ವರ್ಷಗಳ ಕಾಲ ಏನೂ ಬದಲಾವಣೆ ಹೊಂದದೇ ಉಳಿದು ಬ್ರಿಟಿಷರು ಇಲ್ಲಿ ಕಾಲಿಟ್ಟ ಮೇಲೆ ಒಮ್ಮಿಂದೊಮ್ಮೆಗೇ ಬದಲಾವಣೆ ಹೊಂದಿದವು. ಅಂದರೆ, ಕಲ್ಲಾಗಿ ನಿಂತಿದ್ದ ಅಹಲ್ಯೆಯು ಶ್ರೀರಾಮಚಂದ್ರನ ಪಾದಸ್ಪರ್ಶವಾಗುತ್ತಲೇ ಒಮ್ಮಿಂದೊಮ್ಮೆಗೆ ಪಾಪ ವಿಮೋಚನೆ ಪಡೆದಂತೆ ಭಾ ರ ತೀ ಯ ಗ್ರಾಮಗಳು ಬ್ರಿಟಿಷರ ಪಾದಸ್ಪರ್ಶವಾಗುತ್ತಲೇ ಸಂಪ್ರದಾಯದಿಂದ ವಿಮೋಚನೆ ಪಡೆದವು. ಇದು ಸತ್ಯಕ್ಕೆ ದೂರವಾದ ಮಾತು. ವೇದಗಳಲ್ಲಿ ಸೂಚಿತವಾದ ಜನವಸತಿಗಳು ಅಥವಾ ಕೌಟಿಲ್ಯನು ಹೇಳಿದ ಗ್ರಾಮಗಳು ಅಥವಾ 'ಶುಕ್ರನೀತಿಸಾರ'ದಲ್ಲಿ ವರ್ಣಿತವಾದ ಗ್ರಾಮ, ಪಲ್ಲಿ, ಕುಂಭಗಳು ಮುಂದೆ ಅನೇಕ ಶತಮಾನ

ಗಳ ವರೆಗೆ ಇದ್ದಕ್ಕಿದ್ದಂತೆ ಮುಂದುವರಿಯಲಿಲ್ಲ. ಆ ನಂತರ ಮಧ್ಯಯುಗದಲ್ಲಿ, ಮೊಗಲರ ಆಡಳಿತ ಕಾಲದಲ್ಲಿ, ಬ್ರಿಟಿಷ್ ಆಳ್ವಿಕೆಯಲ್ಲಿ ಹಾಗೂ ಭಾರತಕ್ಕೆ ಸ್ವಾತಂತ್ರ್ಯ ದೊರೆತ ನಂತರದ ವರ್ಷಗಳಲ್ಲಿ ಈ ಗ್ರಾಮಗಳು ಅನೇಕ ರಾಜಕೀಯ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಪ್ರಭಾವಗಳಿಗೆ ಒಳಗಾಗಿವೆ. ಇವೆಲ್ಲ ಪ್ರಭಾವಗಳ ಹೊಡೆತಕ್ಕೆ ಸಿಕ್ಕು ಭಾರತೀಯ ಗ್ರಾಮಗಳು ನುಚ್ಚುನೂರಾಗಿ ಹೋದವು ಎಂದು ಹೇಳುವುದು ತಪ್ಪಾದೀತು, ಯಾಕೆಂದರೆ ಬಹುಕಾಲದಿಂದಿರುವ ಯಾವ ಸಾಮಾಜಿಕ ವ್ಯವಸ್ಥೆಯೂ ಅನೇಕ ಆಘಾತಗಳನ್ನು ತಡೆದುಕೊಳ್ಳುವ ಶಕ್ತಿಯನ್ನು ಪಡೆದುಕೊಂಡಿರುತ್ತದೆ. ಭಾರತೀಯ ಗ್ರಾಮ ವಾದರೂ ಹಾಗೆಯೇ. ಅದು ಸಾಕಷ್ಟು ಸುದೃಢವಾಗಿಯೇ ಮುಂದುವರಿಯಿತು. ಆದರೂ ಬ್ರಿಟಿಷರು ಇಲ್ಲಿಗೆ ಬಂದಾಗ ಅವರು ಕಂಡ ಗ್ರಾಮಗಳು ಭಾರತೀಯ ಸಂಸ್ಕೃತಿಯ ಒಳ್ಳೆಯ ಮಾದರಿಯನ್ನು ತೋರಿಸುತ್ತಿರಲಿಲ್ಲ ಎಂದರೆ ತಪ್ಪಾಗಲಿಕ್ಕಿಲ್ಲ. ಅಂದರೆ ಅವು ತಮ್ಮ ಸತ್ವವನ್ನು ಕಳೆದುಕೊಂಡಿದ್ದವು. ಹತ್ತೊಂಭತ್ತನೆಯ ಶತಮಾನದ ಆದಿಭಾಗದಲ್ಲಿ ಇಲ್ಲಿಗೆ ಬಂದ ಬ್ರಿಟಿಷ್ ಆಡಳಿತಗಾರರು ಹಾಗೂ ಪ್ರವಾಸಿಕರು ಭಾರತದ ಪ್ರಾಚೀನ ಗ್ರಾಮಗಳ ಸವಿಯಾದ ವರ್ಣನೆಯನ್ನು ಕೇಳಿತಿಳಿದಿದ್ದರು. ಆದರೆ ತಾವು ಇಲ್ಲಿಗೆ ಬಂದಮೇಲೆ ನೋಡಿದ ಸಮಕಾಲೀನ ಗ್ರಾಮಗಳಲ್ಲಿ ಬಡತನ, ಅಜ್ಞಾನ, ಅಭಾವಗಳೇ ತುಂಬಿದ್ದವು. ಕೆಲವು ಲೇಖಕರು ವರ್ಣಿಸಿದಂತೆ ಅವು "ಪುಟ್ಟ ಗಣರಾಜ್ಯಗಳಾ" ಗಿರಲಿಲ್ಲ. ಅವು ಕೇವಲ "ಹಿಂದುಳಿದ ಗ್ರಾಮಗಳಾ"ಗಿದ್ದವು.

ಈ ಕಾರಣಕ್ಕಾಗಿಯೇ ಕೆಲವು ಬ್ರಿಟಿಷರು ಈ ಗ್ರಾಮಗಳನ್ನು ಭಾರತೀಯ ಸಂಸ್ಕೃತಿಯ ಸಂಪ್ರೋಷಣಾಕೇಂದ್ರಗಳೆಂದು ಭಾವಿಸಿ, ಅಂಥ "ಪುಟ್ಟ ಗಣರಾಜ್ಯಗಳ"ನ್ನು ಪುನಃ ಸ್ಥಾಪಿಸುವುದು ಅತ್ಯುತ್ತಮ ಮಾರ್ಗವೆಂದು ವಾದಿಸಿದರೆ, ಮತ್ತೆ ಕೆಲವರು ಬಡತನ, ಅಜ್ಞಾನ, ಸಂಪ್ರದಾಯಶೀಲತೆ ಮತ್ತು ಜಡತೆಗಳಿಂದ ಕೂಡಿದ ಗ್ರಾಮಗಳೆಂಬ ಈ "ಕತ್ತಲಿನ ಕೋಣೆ"ಗಳನ್ನು ನಿರ್ಮೂಲನಗೊಳಿಸಬಯಸಿದರು.

ಹತ್ತೊಂಭತ್ತನೆಯ ಶತಮಾನದ ಕೊನೆಗೆ ಅಥವಾ ಇಪ್ಪತ್ತನೇ ಶತಮಾನದ ಮೊದಲ ದಶಕಗಳಲ್ಲಿ ಭಾರತೀಯ ಗ್ರಾಮಗಳು ಹೇಗಿದ್ದವು ಎಂಬುದನ್ನು ಊಹಿಸಿಕೊಂಡರೆ ಸದ್ಯ ನಡೆಯುತ್ತಿರುವ ಗ್ರಾಮೀಣ ಪರಿವರ್ತನೆಯು ಚೆನ್ನಾಗಿ ಮನದಟ್ಟಾಗುತ್ತದೆ. ಆಗ ನಮ್ಮ ಗ್ರಾಮಗಳು ಪ್ರತ್ಯೇಕಿತ ದ್ವೀಪಗಳಂತಿದ್ದವು; ಅವು ಹೆಚ್ಚು ಕಡಿಮೆ ಸಂಪರ್ಕಹೀನವಾಗಿದ್ದವು. ಮಳೆಗಾಲದ ಕೆಲವು ತಿಂಗಳುಗಳಲ್ಲಿಯಂತೂ ಬಹುತೇಕ ಗ್ರಾಮಗಳಿಂದ ಹೊರಗೆ ಹೋಗುವುದಾಗಲೀ ಅಥವಾ ಒಳಗೆ ಬರುವುದಾಗಲೀ ಅಸಾಧ್ಯವೆನಿಸುತ್ತಿತ್ತು. ಸಂಪರ್ಕದ ಮಾತು ಹೀಗಾದರೆ, ಸಾಮಾಜಿಕವಾಗಿ ಅವು ಸಂಪ್ರದಾಯಶೀಲವಾಗಿದ್ದವು. ಅಲ್ಲಿ ಮೂಢನಂಬಿಕೆ, ಕಂದಾಚಾರಗಳು ಮನೆಮಾಡಿಕೊಂಡಿದ್ದವು. ಪ್ರಾಣಿಬಲಿ, ಅಸ್ಪೃಶ್ಯತೆ, ಬಾಲ್ಯವಿವಾಹ, ದೇವದಾಸಿ ಪದ್ಧತಿಗಳಂಥ ಅನಿಷ್ಟಗಳು ಸಾಮಾನ್ಯವಾಗಿದ್ದವು. ವಿವಾಹ, ಬಾಂಧವ್ಯ, ವೃತ್ತಿ ಹಾಗೂ ಸಾಮಾಜಿಕ ಲೇವಾದೇವಿಗೆ

ಜಾತಿಯೇ ಆಧಾರವಾಗಿತ್ತು. ಜಾತಿಗಳನ್ನು ವರ್ಣೀಯರು ಹಾಗೂ ಅವರ್ಣೀಯರೆಂದೂ, ಸ್ಪೃಶ್ಯರು ಹಾಗೂ ಅಸ್ಪೃಶ್ಯರೆಂದೂ ವಿಂಗಡಿಸಲಾಗುತ್ತಿತ್ತು. ವರ್ಣ ವ್ಯವಸ್ಥೆಗೆ ಹೊರಗಿರುವ ಜನರನ್ನು ಪಂಚಮರೆಂದು ಕರೆದು ಅವರನ್ನು ಊರ ಹೊರಗೆ ಇಡುವುದು ಸಂಪ್ರದಾಯವಾಗಿತ್ತು. ಅಸ್ಪೃಶ್ಯರೆನ್ನಿಸಿದ ಹರಿಜನರು ಸಂಕಷ್ಟದ ಬಾಳನ್ನು ಬಾಳುತ್ತಿದ್ದರು. ಗ್ರಾಮದಲ್ಲಿ ಸತ್ತ ದನಕರುಗಳನ್ನೂ, ಪ್ರಾಣಿಗಳನ್ನೂ ಎತ್ತಿ ಹೊರಗೊಯ್ಯುವುದೂ ಚರ್ಮದ ಕೆಲಸಮಾಡುವುದೂ ಅವರಿಗೆ ಮೀಸಲಾಗಿತ್ತು. ಇತರ ಕೆಲವು ಕೆಳಜಾತಿಯವರಂತೆ ಇವರೂ ಬಿಟ್ಟಿ-ಬೇಗಾರಿ ಮಾಡಬೇಕಾಗುತ್ತಿತ್ತು. ಕೆಲವು ಕೆಳಜಾತಿಗಳನ್ನು ಬಿಟ್ಟರೆ ಉಳಿದ ಜಾತಿಗಳಲ್ಲಿ ವಿಧವೆಗೆ ಪುನರ್ವಿವಾಹ ಸಾಧ್ಯವಿರಲಿಲ್ಲ. ಹೆಣ್ಣಿಗೆ ಆಸ್ತಿಯ ಹಕ್ಕು ಇರಲಿಲ್ಲ; ಸ್ವಾತಂತ್ರ್ಯವಿರಲಿಲ್ಲ. ಹಳ್ಳಿಗರ ದಾರಿದ್ರ್ಯ ಕಣ್ಣು ಕುಕ್ಕುವಂತಿತ್ತು. ಮಣ್ಣು ಬಿದಿರುಗಳ ತಟ್ಟಿಯಿಂದ ಮಾಡಿದ ಮನೆಗಳಲ್ಲಿ ಜನರು ವಾಸಿಸುತ್ತಿದ್ದರು. ವೈದ್ಯಕೀಯ ಶುಶ್ರೂಷೆಯಿಲ್ಲದೆ ಜನರು ರೋಗರುಜಿನಗಳಿಗೆ ತುತ್ತಾಗುವುದು ಸರ್ವೇಸಾಮಾನ್ಯ ಸಂಗತಿಯಾಗಿತ್ತು. ಜನರ ಸರಾಸರಿ ಆಯುರ್ಮಾನ ಸುಮಾರು ೨೭ ವರ್ಷಗಳಿಗೆ ಮೀರಿರಲಿಲ್ಲ.

ಆರ್ಥಿಕವಾಗಿ ಗ್ರಾಮೀಣರು ಕೃಷಿಯನ್ನು ಅವಲಂಬಿಸಿಕೊಂಡಿದ್ದರು. ಹೆಚ್ಚಿನವರು ಸ್ವಂತ ಭೂಮಿಯ ಮೇಲೆ ಅಥವಾ ಗೇಣಿ ಜಮೀನಿನ ಮೇಲೆ ಕೃಷಿ ಮಾಡಿಕೊಂಡಿದ್ದರೆ ಮತ್ತೆ ಕೆಲ

ವರು ಕೃಷಿಕಾರ್ಮಿಕರಾಗಿ ಅಥವಾ ಜೀತದಾಳುಗಳಾಗಿ ದುಡಿಯುತ್ತಿದ್ದರು. ರೈತರು ಹೆಚ್ಚಾಗಿ ಆಹಾರದ ಬೆಳೆಗಳನ್ನು ಬೆಳೆಯುತ್ತಿದ್ದರು. ಗ್ರಾಮದ ಭೂಮಿಯಲ್ಲಿ ಹೆಚ್ಚಿನ ಪಾಲು ಕೆಲವೇ ಕೆಲವು ಕುಟುಂಬಗಳಿಗೆ ಸೇರಿರುತ್ತಿತ್ತು. ಭೂಮಾಲಿಕರ ಈ ಭೂಮಿಯನ್ನು ಗೇಣಿದಾರರಾದ ರೈತರು ಕೃಷಿಮಾಡುತ್ತಿದ್ದರು. ತಾವು ಬೆಳೆದುದರಲ್ಲಿ ಬಹುಭಾಗವನ್ನು ಇವರು ತಮ್ಮ ಭೂಮಾಲಿಕರಿಗೆ ಕೊಡಬೇಕಾಗುತ್ತಿತ್ತು. ರೈತರು ತಾವು ಬೆಳೆವ ಬೆಳೆಯಲ್ಲಿ ಉರುಟು ಧಾನ್ಯವನ್ನು ಮನೆ ಖರ್ಚಿಗೆಂದು ಉಪಯೋಗಿಸಿಕೊಳ್ಳುತ್ತಿದ್ದರು. ಉತ್ತಮ ಜಾತಿಯ ಗೋದಿ ಜೋಳ, ಭತ್ತವನ್ನು ಧಣಿಗೋ ಪೇಟೆಗೋ ಸಾಗಿಸುವ ಪ್ರಮೇಯವಿತ್ತು. ಹೆಚ್ಚಿನ ಕೂಲಿಕಾರ ಹಾಗೂ ರೈತಾಪಿ ಕುಟುಂಬಗಳು ಸಾಲದಲ್ಲಿ ಹುಟ್ಟಿ, ಸಾಲದಲ್ಲಿ ಬೆಳೆದು, ಸಾಲದಲ್ಲಿ ಸಾಯುತ್ತಿದ್ದವು. ಗ್ರಾಮದ ಆಡಳಿತವು ವಂಶಪಾರಂಪರ್ಯವಾಗಿ ಅಧಿಕಾರಕ್ಕೆ ಬಂದ ಪಟೇಲ ಮತ್ತು ಶಾನುಭೋಗರ ಕೈಯಲ್ಲಿತ್ತು. ಇವರು ಮೇಲ್ಜಾತಿಗಳಿಗೆ ಸೇರಿದವರಾಗಿರುವುದರಿಂದಲೂ ಊರಿನ ಜಮೀನಿನ ಒಡೆಯರಾಗಿರುವುದರಿಂದಲೂ ಗ್ರಾಮವನ್ನು ಒಳ್ಳೇ ದರ್ಪದಿಂದ ಆಳುತ್ತಿದ್ದರು. ಗ್ರಾಮಕ್ಕೆ ಕುಂಬಾರ, ಬಡಗಿ, ಕಮ್ಮಾರ, ಮಡಿವಾಳ ಮುಂತಾದ ಆಯಗಾರರಿದ್ದರು. ಅವರಿಗೆ 'ಆಯಾ' ಅಥವಾ 'ಜಾಜಮಾನಿ' ('ಬಾರಾ ಬಾಲೂತಾ') ಸಂಪ್ರದಾಯದಂತೆ ಪ್ರತಿಫಲ ಸಿಗುತ್ತಿತ್ತು. ಈ ಸಂಪ್ರದಾಯವು ಆಗ ಇನ್ನೂ ಪೂರ್ಣ ಮುರಿದಿರದಿದ್ದರೂ ನಶಿಸುವ ಸ್ಥಿತಿಯಲ್ಲಿತ್ತು. ರೈತರು ನೆಲಕ್ಕೆ ಅಂಟಿ

ಕೊಂಡಿದ್ದರು ನಗರಾಭಿಮುಖವಾದ ವಲಸೆ ಎಂಬುದು ಇನ್ನೂ ಪೂರ್ಣ ಪ್ರಮಾಣದಲ್ಲಿ ಪ್ರಾರಂಭವಾಗಿರಲಿಲ್ಲ.

ಮೇಲೆ ಹೇಳಿದ ವರ್ಣನೆಯು ಭಾರತದ ಎಲ್ಲ ಭಾಗಗಳಿಗೆ ಸೇರಿದ ಎಲ್ಲ ಹಳ್ಳಿಗಳಿಗೆ ಅನ್ವಯಿಸದಿದ್ದರೂ ಅದು ಬಹುತೇಕ ವಾಗಿ ಸತ್ಯವೆನಿಸುತ್ತದೆ. ಸ್ವಾತಂತ್ರ್ಯ ಪೂರ್ವ ಕಾಲದಲ್ಲಿ ಭಾರತದ ಗ್ರಾಮಗಳು ಸದಾ ಇದೇ ನಿರಾಶಾದಾಯಕ ಸ್ಥಿತಿಯಲ್ಲಿದ್ದವು ಎಂಬುದು ನಮ್ಮ ಅಭಿಪ್ರಾಯವಲ್ಲ, ಆದರೂ ಈ ವರ್ಣನೆ ಈಗ ಎರಡು ಮೂರು ತಲೆಮಾರುಗಳಿಗೆ ಹಿಂದೆ ಹೆಚ್ಚು ಕಡಿಮೆ ಸರಿಹೋಗುತ್ತಿತ್ತು ಎಂಬ ಮಾತಂತೂ ಸತ್ಯ. ಗ್ರಾಮೀಣ ಭಾರತದ ಈ ಚಿತ್ರವು ಒಮ್ಮೆಂದೊಮ್ಮೆಗೆ ಬದಲಾಗಲಿಲ್ಲ. ಅನೇಕ ಶತಮಾನಗಳಿಂದ ಬದಲಾವಣೆಯ ಗಾಳಿ ಬೀಸುತ್ತಿದೆ. ಪರಿವರ್ತನೆಯ ಪ್ರೇರಣೆಗಳು ಬಹಳ ಕಾಲದಿಂದಲೂ ಕಾರ್ಯ ಪ್ರವೃತ್ತವಾಗಿವೆ. ಅಂಥ ಪ್ರೇರಣೆಗಳನ್ನು ಪರಿವರ್ತನೆಯ ಕಾರ್ಯಭಾರಿಗಳನ್ನೂ ಮುಂದೆ ನಾವು ಚರ್ಚಿಸೋಣ.

೨. ಗ್ರಾಮೀಣ ಬದಲಾವಣೆ- ಸ್ಥೂಲ ನೋಟ

ಪ್ರಸ್ತುತ ನಮ್ಮ ಗ್ರಾಮೀಣ ಸಮಾಜದಲ್ಲಿ ಉಂಟಾಗಿರುವ ವಿವಿಧ ಬದಲಾವಣೆಗಳನ್ನು ಸ್ಥೂಲವಾಗಿ ನೋಡೋಣ. ಇಲ್ಲಿ ಮುಖ್ಯವಾಗಿ ಕಳೆದ ನಾಲ್ಕು, ಐದು ದಶಕಗಳಿಂದ, ಅದರಲ್ಲೂ ಸ್ವಾತಂತ್ರ್ಯಾನಂತರದ ವರ್ಷಗಳಲ್ಲಿ, ಸಂಭವಿಸುತ್ತಿರುವ ಬದ ಲಾವಣೆಗಳನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ. ಇಲ್ಲಿ

ಪಟ್ಟಿ ಮಾಡಿದಷ್ಟೇ ಬದಲಾವಣೆಗಳು ಆಗಿವೆ ಎಂದು ಭಾವಿಸ ಬಾರದಾದರೂ ನಾವೀಗ ಅಂಥ ಪ್ರಮುಖ ಬದಲಾವಣೆಗಳನ್ನು ಸಂಕ್ಷಿಪ್ತವಾಗಿ ಚರ್ಚಿಸಬಹುದು.

೧. **ಗ್ರಾಮೀಣ ಪರಿಸರ :** ಸ್ವಾತಂತ್ರ್ಯಾನಂತರ ಗ್ರಾಮೀಣ ಪರಿಸ್ಥಿತಿಗಳು ನಿಧಾನವಾಗಿ ಬದಲಾಗುತ್ತ ನಡೆದಿವೆ. ಸಂಪರ್ಕ ಸಾಧನಗಳು ಸುಧಾರಿಸಿವೆ. ಮಳೆಗಾಲದಲ್ಲೂ ಗ್ರಾಮ ಗಳ ನಡುವೆ ಸಾರಿಗೆ ಸಂಪರ್ಕ ಸಾಧ್ಯವಾಗಿದೆ. ಗ್ರಾಮೀಣ ಪರಿ ಸರವು ಈಗ ೫೦ ವರ್ಷಗಳ ಹಿಂದೆ ಇದ್ದುದಕ್ಕಿಂತ ಹೆಚ್ಚು ಆರೋಗ್ಯಕರವಾಗಿದೆ. ನಗರದ ಕೈಗಾರಿಕೆ ಕಾರ್ಖಾನೆಗಳಿಂದ ಬರುವ ಮಾಲಿನ್ಯ ನಮ್ಮ ಹಳ್ಳಿಗಳನ್ನು ಇನ್ನೂ ಕೆಡಿಸಿಲ್ಲ! ಮಲೇರಿಯಾ ನಿರ್ಮೂಲನ ಕಾರ್ಯಕ್ರಮದಿಂದಾಗಿ ಹಿಂದಿ ನಂತೆ ಈಗ ಜನರು ಸಾಯುವದಿಲ್ಲ. ಸಾರ್ವಜನಿಕ ಆರೋಗ್ಯ ಕಾರ್ಯಕ್ರಮಗಳು ಪ್ರಗತಿಪಥದಲ್ಲಿವೆ. ಆಸ್ಪತ್ರೆಗಳು ಮತ್ತು ದಾಯಿಗಳು ಇಲ್ಲದೇ ಇದ್ದುದರಿಂದ ಹಿಂದೆ ಶಿಶುಮರಣ ಅಥವಾ ಬಸಿರಿ ಬಾಣಂತಿಯರ ಮರಣ ಹೆಚ್ಚಿನ ಪ್ರಮಾಣ ದಲ್ಲಿತ್ತು. ಈಗ ಈ ಪ್ರಮಾಣ ಬಹಳಷ್ಟು ಇಳಿದಿದೆ. ಗ್ರಾಮ ಗಳಲ್ಲಿ ವಿದ್ಯುತ್ ದೀಪ, ರೇಡಿಯೋ, ಬೈಸಿಕಲ್ಲು, ಹಿಟ್ಟಿನ ಗಿರಣಿ, ಗಿರಣಿ ಬಟ್ಟೆಗಳು, ಶ್ರಮ ಉಳಿಸುವ ಉಪಕರಣಗಳು ಕುಡಿಯುವ ನೀರಿನ ಭಾವಿಗಳು, ರಸ್ತೆ, ಸೇತುವೆ, ಬೀದಿ ದೀಪ ಗಳು, ವಾಸನೆ ಇಲ್ಲದ ಚರ್ಮಗಾರಿಕೆ ಇತ್ಯಾದಿ ಹತ್ತು ಹಲವು ವಿಷಯಗಳು ಪ್ರವೇಶಮಾಡಿವೆ.

೨. ಶಿಥಿಲಗೊಂಡ ಸ್ವಯಂಪೂರ್ಣತೆ : ಭಾರತೀಯ ಗ್ರಾಮವು ಸ್ವಯಂಪೂರ್ಣವೆಂಬ ಭಾವನೆಯನ್ನು ಬಹಳ ಜನರು ಬಹಳ ದಿನಗಳಿಂದ ಇಟ್ಟುಕೊಂಡಿದ್ದಾರೆ. ಇದು ಸುಳ್ಳೂ ಅಲ್ಲ, ಪೂರ್ಣ ಸತ್ಯವೂ ಅಲ್ಲ. ಸಾರಿಗೆ ಸಂಪರ್ಕಗಳಿಲ್ಲದ ಹಿಂದಿನ ಕಾಲದಲ್ಲಿ ಹಳ್ಳಿಗರು ತಮಗೆ ಬೇಕಾದ ಕಾಳುಕಡಿ, ನೊಗ-ನೇಗಿಲು' ಅರಿವೆ ಔಷಧಿಗಳನ್ನು ತಮ್ಮ ಗ್ರಾಮಗಳಲ್ಲಿಯೇ ಪಡೆಯಬೇಕಾದುದು ಅನಿವಾರ್ಯವಾಗಿತ್ತು. ಹಾಗೆಯೇ ಊರಿನ ಆಯಗಾರರು ಹಾಗೂ ನೆರೆಹೊರೆಯವರು ಕೊಡುವ ಸೇವೆ-ಸಹಾಯಗಳನ್ನು ನಂಬಿಕೊಂಡಿರಬೇಕಾಗಿತ್ತು. ಆದರೂ ಅವರಿಗೆ ಹೊರಗಿನ ಹಳ್ಳಿಯುವರ ಸಹಾಯ ಬೇಕಾಗುತ್ತಿತ್ತು. ಯಾತ್ರೆ. ಜಾತ್ರೆ, ವ್ಯಾಪಾರ, ಗಂಡು-ಹೆಣ್ಣುಗಳನ್ನು ಹುಡುಕುವುದು ಮುಂತಾದ ಕಾರಣಗಳಿಗಾಗಿಯೂ ಹೊರಗಿನ ಹಳ್ಳಿಗಳ ಮೇಲೆ ಅವರು ಅವಲಂಬಿಸಬೇಕಾಗುತ್ತಿತ್ತು. ಅದೇನೇ ಇದ್ದರೂ ಬ್ರಿಟಿಷ್ ಆಡಳಿತೆಯ ಕಾಲದಲ್ಲಿ ಗ್ರಾಮಗಳು ಸ್ವಯಂ ಪೂರ್ಣತೆಯ ಲಕ್ಷಣವನ್ನು ಪೂರ್ಣವಾಗಿ ಕಳೆದುಕೊಂಡವು. ಗ್ರಾಮದ ಪೇಟೆಗಳು ಸುತ್ತಮುತ್ತಲಿನ ಪೇಟೆಗಳೊಡನೆ,ರಾಜ್ಯ ಅಥವಾ ರಾಷ್ಟ್ರದ ಪೇಟೆಗಳೊಂದಿಗೆ ಲೀನವಾಗುತ್ತ ಬಂದವು. ಗ್ರಾಮೀಣರು ಬೆಳೆಯುವ ಕಬ್ಬು, ಹತ್ತಿ, ತಂಬಾಕು, ರೇಶ್ಮೆ, ಚಹಾ, ಕಾಫಿ ಮೊದಲಾದ ಬೆಳೆಗಳಿಗೆ ಹೊರಗಿನ ಮಾರುಕಟ್ಟೆಗಳೇ ಬೇಕಾಗಿವೆ. ರಾಜಕೀಯವಾಗಿಯೂ ಹಳೆಯ ಸ್ವಯಂಪೂರ್ಣತೆ ಮಾಯವಾಗಿವೆ. ಸರಕಾರವು ಹಳ್ಳಿಗನ ಭೂಹಿಡುವಳಿಯ ಪ್ರಮಾಣವನ್ನೂ ಅವನು ಬೆಳೆಯುವ ವಿವಿಧ ಬೆಳೆಗಳ ಪ್ರಮಾಣವನ್ನೂ,

ಆ ಬೆಳೆಗಳಿಗೆ ಪೇಟೆಯಲ್ಲಿ ದೊರೆಯುವ ಬೆಲೆಯನ್ನೂ, ಇಂಥ ಇನ್ನೂ ಅನೇಕ ವಿಷಯಗಳನ್ನು ನಿಯಂತ್ರಿಸುತ್ತದೆ. ಹೀಗೆ ಬರ ಬರುತ್ತ ಗ್ರಾಮದ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಸ್ವಯಂಪೂರ್ಣತೆ ಶಿಥಿಲಗೊಂಡಿದೆ. ಆದುದರಿಂದ ನಾವೀಗ ನಮ್ಮ ಗ್ರಾಮಗಳನ್ನು ಚಾರ್ಲ್ಸ್ ಮೆಟಕಾಫ್ ವರ್ಣಿಸಿದಂತೆ "ತಮಗೆ ಬೇಕಾದ ಹೆಚ್ಚು ಕಡಿಮೆ ಎಲ್ಲವನ್ನೂ ಪಡೆದುಕೊಂಡಿರುವ ಹಾಗೂ ಬಾಹ್ಯ ಸಂಬಂಧಗಳಿಂದ ಸ್ವತಂತ್ರವಾಗಿರುವ ಪುಟ್ಟ ಗಣರಾಜ್ಯಗಳು" ಎಂದು ವರ್ಣಿಸುವುದು ಅನುಚಿತವಾದೀತು.

೩. ಗ್ರಾಮೀಣ ಶಿಕ್ಷಣ: ಈ ದೇಶದಲ್ಲಿ ಬಹಳ ಕಾಲದಿಂದಲೂ ಸಾಕ್ಷರತೆಯ ಪ್ರಮಾಣವು ಅತಿ ಕಡಿಮೆ. ಗ್ರಾಮೀಣ ಮಹಿಳೆಯರಲ್ಲಂತೂ ಅದು ಕೇವಲ ೨-೩% ರಷ್ಟು ಇತ್ತು. ೬ ರಿಂದ ೧೧ ವಯೋಮಾನದ ಮಕ್ಕಳಿಗೆ ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯ ಮಾಡಿರುವುದರಿಂದ ಅಕ್ಷರಸ್ಥರ ಪ್ರಮಾಣ ಕ್ರಮೇಣವಾಗಿ ಸುಧಾರಿಸಿದೆ. ಜೊತೆಗೆ ವಯಸ್ಕರ ಶಿಕ್ಷಣದಲ್ಲಿಯೂ ಸ್ವಲ್ಪಮಟ್ಟಿಗೆ ಪ್ರಗತಿಯಾಗಿದೆ. ಐದನೆಯ ಯೋಜನೆಯ ಕೊನೆಯೊಳಗಾಗಿ ಗ್ರಾಮಾಂತರ ಪ್ರದೇಶದಲ್ಲಿರುವ ೬ರಿಂದ ೧೧ ವಯೋಮಿತಿಯಲ್ಲಿರುವ ಎಲ್ಲ ಮಕ್ಕಳಿಗೂ ಹಾಗೂ ೧೧ ರಿಂದ ೧೪ ವಯೋಮಿತಿಯಲ್ಲಿರುವ ಸುಮಾರು ೮೦% ರಷ್ಟು ಮಕ್ಕಳಿಗೂ ಶಾಲೆಗೆ ಸೇರಿಸುವ ಪ್ರಯತ್ನ ನಡೆದಿದೆ. ಗ್ರಾಮಾಂತರ ಪ್ರದೇಶದಲ್ಲಿ ಪ್ರಾಥಮಿಕ ಶಾಲೆಗಳಷ್ಟೇ ಅಲ್ಲ, ಮಾಧ್ಯಮಿಕ

ಶಾಲೆಗಳೂ ಹೈಸ್ಕೂಲುಗಳೂ ಕಂಡುಬರುತ್ತಿವೆ. ಅದೆಷ್ಟೋ ಗ್ರಾಮಗಳಲ್ಲಿ ಪದವೀಧರರಿದ್ದಾರೆ. ಪ್ರಜಾಪ್ರಭುತ್ವದ ಹಕ್ಕುಗಳೂ ಕರ್ತವ್ಯಗಳೂ ಶಿಕ್ಷಣದಿಂದ ತಿಳಿಯುತ್ತವೆ ಎಂದು ಸಾಬೀತಾಗಿದೆ. ಶಿಕ್ಷಣದಿಂದ ತಮ್ಮ ಆರ್ಥಿಕ ಹಾಗೂ ಸಾಮಾಜಿಕ ಸ್ಥಾನಮಾನವನ್ನು ಸುಧಾರಿಕೊಳ್ಳಬಹುದೆಂಬ ಅರಿವು ಹಳ್ಳಿಗರಲ್ಲಿ ಮೂಡಿದೆ. ಇದರಿಂದಾಗಿ ಅವರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಲು ಉತ್ಸುಕರಾಗಿದ್ದಾರೆ.

೪. ಭೂಸುಧಾರಣೆ, ಹಳೆಯ ಮಧ್ಯವರ್ತಿಗಳ ಕಣ್ಮರೆ: ಗ್ರಾಮದ ಆರ್ಥಿಕ ಸಂಸ್ಥೆಗಳು, ಅಧಿಕಾರ ವಿತರಣೆಗಳು ಹಾಗೂ ಜಾತಿ ಸಮತೋಲಗಳು ಬದಲಾಗುತ್ತಿವೆ. ಇದಕ್ಕೆ ಒಂದು ಮುಖ್ಯವಾದ ಕಾರಣವೆಂದರೆ ಭೂಸುಧಾರಣೆಯ ಚಳವಳಿ. ಭಾರತದ ವಿವಿಧ ಪ್ರದೇಶಗಳಲ್ಲಿ ಇದರ ಪ್ರಗತಿ ಮತ್ತು ಪರಿಣಾಮಗಳು ಒಂದೇ ರೀತಿಯಾಗಿವೆ ಎಂದು ಹೇಳಲು ಬರುವುದಿಲ್ಲ. ಆದರೆ ಭೂಸುಧಾರಣೆಗಳಿಂದಾಗಿ ಜಮೀನುದಾರ, ಜಾಗೀರುದಾರ, ತಾಲೂಕದಾರರೆನ್ನಿಸಿಕೊಳ್ಳುತ್ತಿದ್ದ ವರ್ಗವು ಈ ಹಿಂದೆ ಮಾಡುತ್ತಿದ್ದ ಶೋಷಣೆಯು ಸ್ವಲ್ಪ ಮಟ್ಟಿಗಾದರೂ ನಿಂತು ಹೋಗಿದೆ. ಈ ಹಳೆಯ ಹುಲಿಗಳ ದರ್ಪ ಇಳಿದಿದೆ. ಉಳುವವನಿಗೇ ಭೂಮಿ ಕೊಡದಿದ್ದರೆ ಅಭಿವೃದ್ಧಿ ಸಾಧ್ಯವಾಗಲಿಕ್ಕಿಲ್ಲ ಎಂಬ ಅರಿವು ಮೂಡುತ್ತಿದೆ.

೫. ಬದಲಾಗುತ್ತಿರುವ ಜಾತಿಯ ಏಣಿಶ್ರೇಣಿ ಹಾಗೂ ಸಮತೋಲ: ಸಾಂಪ್ರದಾಯಿಕ ಭಾರತೀಯ

ಗ್ರಾಮೀಣ ಸಮಾಜದ ಇನ್ನೊಂದು ಲಕ್ಷಣವೆಂದರೆ ಜಾತಿ ಪದ್ಧತಿ. ಗ್ರಾಮ - ಸಮುದಾಯವು ಹಲವು ಜಾತಿಗುಂಪುಗಳಿಗೆ ಆಶ್ರಯಕೊಡುತ್ತದೆ. ಈ ಗುಂಪುಗಳಿಗೆ ವಿವಿಧ ಸ್ಥಾನಮಾನ, ಕರ್ತವ್ಯ, ಹಕ್ಕುಭಾದ್ಯತೆಗಳಿವೆ. ಇಡೀ ದೇಶದ ದೃಷ್ಟಿಯಿಂದ ನೋಡಿದರೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರೆಂಬ ನಾಲ್ಕು ವರ್ಣಗಳಿದ್ದವು. ಇವು ಕ್ರಮೇಣ ನೂರಾರು ಜಾತಿಗಳಿಗೆ ಎಡೆಮಾಡಿಕೊಟ್ಟವು. ಈ ಜಾತಿಗಳಲ್ಲಿ ಕೆಲವರು ವರ್ಣ ವ್ಯವಸ್ಥೆಗೆ ಹೊರಗಿನವರು. ಇವರು ಅಸ್ಪೃಶ್ಯರು. ಸ್ಥಳೀಯವಾಗಿ ನೋಡಿದರೆ ಪ್ರತಿಯೊಂದು ಗ್ರಾಮದಲ್ಲಿ ಕಡಿಮೆಯೆಂದರೆ ನಾಲ್ಕೈದು ಜಾತಿಗಳೂ ಹೆಚ್ಚೆಂದರೆ ಹತ್ತಿಪ್ಪತ್ತು ಜಾತಿಗಳೂ ಇರಬಹುದು. ಈ ಜಾತಿಗಳಲ್ಲಿ ಕೆಲವನ್ನು ಮೇಲ್ಜಾತಿಗಳೆಂದೂ ಕೆಲವು ಜಾತಿಗಳನ್ನು ಕೆಳಜಾತಿಗಳೆಂದೂ ಪರಿಗಣಿಸಲಾಗುತ್ತದೆ. ವಿವಿಧ ಜಾತಿಗಳ ಜನರು ಹಳ್ಳಿಯ ಪ್ರತ್ಯೇಕ ಭಾಗಗಳಲ್ಲಿ ವಾಸಿಸುವುದು ಸಂಪ್ರದಾಯ. ಸಾಮಾನ್ಯವಾಗಿ ಹೊಲಮನೆ ಮಾಡುವ ರೈತರು, ಗೇಣಿದಾರರು, ಕೂಲಿಯಾಳುಗಳು, ಜೀತಗಾರರು ಕೆಳಜಾತಿಗೆ ಸೇರಿದವರಾಗಿದ್ದರು. ಭೂಮಾಲಿಕರು ಹಾಗೂ ಶ್ರೀಮಂತರು ಹೆಚ್ಚಾಗಿ ಮೇಲ್ಜಾತಿಗೆ ಸೇರಿದವರಾಗಿದ್ದರು. ಗ್ರಾಮದ ಎಲ್ಲ ಅಧಿಕಾರ ಹಾಗೂ ಅನುಕೂಲಗಳು ಇವರ ಕೈಯಲ್ಲಿರುತ್ತಿದ್ದವು.

ಈಗ ಜಾತಿಯ ಈ ಏಣಿಶ್ರೇಣಿ ನಿಶ್ಚಯವಾಗಿಯೂ ಕದಕಿ ಹೋಗಿದೆ. ಗ್ರಾಮ ಪಂಚಾಯತಿಯವರು ಹಾಗೂ ಸರಕಾರದ

ಪತಿಯಿಂದ ಹಳ್ಳಿಗೆ ಬರುವ ಅಧಿಕಾರಿಗಳು ಹಳೆಯ ತಾರತಮ್ಯ ಗಳನ್ನು ಅಧಿಕೃತವಾಗಿ ಒಪ್ಪುವುದಿಲ್ಲ. ಕೆಲವೊಮ್ಮೆ ಸ್ವತಃ ಹಳ್ಳಿಗರೇ ಅವುಗಳನ್ನು ಒಪ್ಪುವುದಿಲ್ಲ. ಹಿಂದೆ ತಮ್ಮ ಜನಸಂಖ್ಯಾ ಬಲದಿಂದ ಹಾಗೂ ಧನಬಲದಿಂದ ಹೆಚ್ಚಿನ ಸ್ಥಾನಮಾನಗಳನ್ನು ಪಡೆಯುತ್ತಿದ್ದ ಪ್ರಧಾನ ಜಾತಿ (Dominant Caste) ಗಳು ಈಗ ತಮ್ಮ ಹಿಡಿತವನ್ನು ಕಳೆದುಕೊಳ್ಳುತ್ತಿವೆ. ಬದಲಾಗುತ್ತಿರುವ ಪರಿಸ್ಥಿತಿಗಳಲ್ಲಿ ಇತರ ಜಾತಿಗಳು ಈ ಅಧಿಕಾರ ಹಾಗೂ ಅನುಕೂಲಗಳನ್ನು ಸ್ವಲ್ಪಮಟ್ಟಿಗಾದರೂ ಹಂಚಿಕೊಳ್ಳುತ್ತಿದ್ದಾರೆ. ಉದಾಹರಣೆಗೆ, ಆಂದ್ರ ಬೆತೆ (Andre Beteille) ಅಧ್ಯಯನ ಮಾಡಿದ ಶ್ರೀಪುರಮ್ ಗ್ರಾಮದಲ್ಲಿ ಹಿಂದೆ ಪ್ರಧಾನ ಜಾತಿಯವರಾಗಿದ್ದ ಬ್ರಾಹ್ಮಣ ಮಿರಾಸದಾರರು ಈಗ ಹಳೆಯಕಾಲದ ವೈಭವ, ಅಂತಸ್ತುಗಳನ್ನು ಮರೆಯಬೇಕಾಗಿದೆ. ಸ್ಕಾರಲೆಟ್ ಎಪಸ್ಟೀನ್ ಎಂಬ ಮಹಿಳೆ ಅಧ್ಯಯನ ಮಾಡಿದ ಮಂಡ್ಯದ ಹತ್ತಿರದ ಗ್ರಾಮಗಳಲ್ಲಿ ಒಕ್ಕಲಿಗ ಜಾತಿಯ ಜಮೀನುದಾರರು ಈಗ ತಮ್ಮ ಹಳೆಯ ಅಧಿಕಾರಿಗಳನ್ನು ಪೂರ್ಣವಾಗಿ ಕಳೆದುಕೊಳ್ಳದಿದ್ದರೂ ಅಲ್ಲಿ ಬದಲಾವಣೆಯ ಗಾಳಿ ಬೀಸುತ್ತಿದೆ. ಇಂಥ ನೂರಾರು ಅಧ್ಯಯನಗಳಿಂದ ತಿಳಿದು ಬರುವ ವಿಷಯವೆಂದರೆ ದೇಶದ ಬೇರೆ ಕಡೆಗಳಲ್ಲೂ ಹೀಗೆ ಜಾತಿಯ ಸಮತೋಲಗಳು ತಪ್ಪುತ್ತಿವೆ. ಅಷ್ಟೇ ಅಲ್ಲ, ದೇಶದ ಅನೇಕ ಕಡೆ ವಿವಿಧ ಜಾತಿಗಳ ನಡುವಿನ ಸಂಘರ್ಷವು ವರದಿಯಾಗಿದೆ. ಬಿಹಾರ, ಒರಿಸ್ಸಾ, ಮಧ್ಯಪ್ರದೇಶಗಳಲ್ಲಿ ಹರಿಜನ ಮತ್ತು ಕೆಳಜಾತಿಯ ರೈತರು ಹಾಗೂ ಮೇಲುಜಾತಿಯ ಭೂಮಾಲಿಕರ ನಡುವೆ ಅಂತರ್ಯು

ದ್ಧವೇ ನಡೆದಿದೆ. ಆಧುನಿಕ ಕಾಯ್ದೆ ಕಾನೂನುಗಳು ಜಾತಿಗಳ ಅಂತರ್ಯುದ್ಧಕ್ಕೆ ಆಸ್ಪದ ಮಾಡಿಕೊಟ್ಟಿವೆ.

೬. ಗ್ರಾಮೀಣ ಅಭಿವೃದ್ಧಿ ಯೋಜನೆಗಳು : ಗ್ರಾಮೀಣ ಅಭಿವೃದ್ಧಿ ಯೋಜನೆಗಳು ಈ ದೇಶದ ಹಳ್ಳಿಗಳ ಸ್ಥಿತಿಗತಿಗಳನ್ನು ಹಲವು ರೀತಿಗಳಲ್ಲಿ ಬದಲಿಸುತ್ತಿದೆ. ಯೋಜಿತ ಫಲಗಳು ಬಾರದೇ ಇರಬಹುದು. ಆದರೆ ಅಭಿವೃದ್ಧಿ ಯೋಜನೆಗಳ ಪ್ರಭಾವವನ್ನು ಅಲ್ಲಗಳೆಯಲಾಗದು. ಇಂಥ ಯೋಜನೆಗಳು ಸ್ವಾತಂತ್ರ್ಯ ಪೂರ್ವದಲ್ಲಿಯೇ ಪ್ರಾಯೋಗಿಕವಾಗಿ ಪ್ರಾರಂಭವಾದವು. ಇವುಗಳಲ್ಲಿ ರವೀಂದ್ರನಾಥ ಠಾಕೂರ, ಮಹಾತ್ಮಾಗಾಂಧಿ, ಬ್ರೈನ್, ಹ್ಯಾಚ್, ಕೃಷ್ಣಮಾಚಾರಿ ಮುಂತಾದವರ ಸಣ್ಣ ಪ್ರಮಾಣದ ಪ್ರಯೋಗಗಳನ್ನು ಹೆಸರಿಸಬಹುದು. ಇವರು ಕೆಲವು ಚಿಕ್ಕ ಗ್ರಾಮಗಳನ್ನು ಆಯ್ದುಕೊಂಡು ಅವುಗಳಿಗೆ ಹೊಸರೂಪ ಕೊಡಲು ಬಯಸಿದರು. ಸ್ವಾತಂತ್ರ್ಯ ನಂತರದಲ್ಲಿ ಮದ್ರಾಸು ಸರಕಾರವು ಫಿರ್ಕಾ ಯೋಜನೆಯನ್ನು ಹಮ್ಮಿಕೊಂಡು ಗ್ರಾಮಗಳನ್ನು ಅಭಿವೃದ್ಧಿಗೊಳಿಸಲು ಪ್ರಯತ್ನಿಸಿತು. ಉತ್ತರ ಪ್ರದೇಶದಲ್ಲಿ ಪ್ರಾರಂಭಿಸಿದ ಎಟಾವಾ ಯೋಜನೆ, ಆ ನಂತರ ಬಂದ ಭಾರತ ಸರಕಾರದ ಪಂಚವಾರ್ಷಿಕ ಯೋಜನೆಗಳು ಗ್ರಾಮದ ಸ್ವರೂಪ ಹಾಗೂ ರಚನೆಯ ಮೇಲೆ ಖಂಡಿತವಾಗಿಯೂ ಪ್ರಭಾವ ಬೀರಿವೆ. ಅವು ಹಳ್ಳಿಯ ಹೊರಗಿನ ಜನರನ್ನೂ, ಅವರ ಆಚಾರ ವಿಚಾರಗಳನ್ನೂ, ದೇಶವಿದೇಶಗಳ ಉಪಕರಣ, ಯಂತ್ರಜ್ಞಾನ ಹಾಗೂ ಹಣಕಾಸುಗಳನ್ನೂ ಹಳ್ಳಿಯೊಳಗೆ

ತಂದು ಜನರ ಆಚಾರವಿಚಾರಗಳಲ್ಲಿ ಕೋಲಾಹಲವನ್ನುಂಟು ಮಾಡಿವೆ. ಅಭಿವೃದ್ಧಿಯಿಂದಾಗಿ ಗ್ರಾಮೀಣ ಬಡವರಿಗೆ ಹೆಚ್ಚಿನ ಲಾಭ ಸಿಕ್ಕಿಲ್ಲ ಎಂಬುದನ್ನು ಈಗ ಎಲ್ಲ ಅರ್ಥಶಾಸ್ತ್ರಜ್ಞರೂ ಸಮಾಜಶಾಸ್ತ್ರಜ್ಞರೂ ಕಂಡುಕೊಂಡಿದ್ದಾರೆ. ಆದರೆ ಆ ಬಡ ಜನರಲ್ಲಿ ಹೊಸ ಜಾಗೃತಿ ಮೂಡಿದೆ; ಅವರು ಈಗ ಸಾಮಾಜಿಕ ನ್ಯಾಯವನ್ನು ಬೇಡುತ್ತಿದ್ದಾರೆ ಎಂಬುದನ್ನು ಮರೆಯಬಾರದು.

೭. **ಪಂಚಾಯತಿ ರಾಜ್ಯದ ಸ್ಥಾಪನೆ** : ಅಭಿವೃದ್ಧಿ ಯೋಜನೆಗಳು ಯಶಸ್ವಿಯಾಗಬೇಕಾದರೆ ಜನರು ಇವುಗಳಲ್ಲಿ ಸಕ್ರಿಯವಾಗಿ ಪಾಲುಗೊಳ್ಳಬೇಕೆಂಬ ವಿಚಾರದೊಂದಿಗೆ ಪಂಚಾಯತಿಗಳನ್ನು ಸ್ಥಾಪಿಸಲಾಯಿತು. ಇವುಗಳಿಂದ ಲಾಭಕ್ಕಿಂತ ಹೆಚ್ಚಾಗಿ ನಷ್ಟವೇ ಆಯಿತೆಂಬ ವಾದವಿದೆ. ಗ್ರಾಮಗಳು ರಾಜಕೀಯ ಗೊಂದಲದಲ್ಲಿ ಬಿದ್ದವು. ಗ್ರಾಮದ ಶಾಂತಿ ಕದಡುವಂತಾಯಿತು ಎಂದು ಟೀಕಾಕಾರರು ದೂರಿದ್ದಾರೆ. ಇದು ಅರ್ಧ ಸತ್ಯ. ಪಂಚಾಯತಿ ರಾಜಕೀಯದಿಂದ ಅನೇಕ್ಕೋ ಹಳ್ಳಿಗಳ ಐಕ್ಯ ಭಂಗಗೊಂಡುದು ನಿಜ; ಆದರೆ ಬೇಡ-ಬೆಸ್ತ, ಮಾದ-ಮ್ಯಾದಾರ, ಹೆಣ್ಣು-ಹೊಲೆಯರೆಲ್ಲ ಗ್ರಾಮದ ಸಾಮಾಜಿಕ ಜೀವನದಲ್ಲಿ ಪಾಲುಗೊಳ್ಳಬೇಕೆಂಬ ಅರಿವು ಮೂಡಿದ್ದು ಸುಳ್ಳಲ್ಲ. ಈ ಜನರು ಬದುಕಲು ಕಲಿತಂತೆ ಅದಕ್ಕಾಗಿ ಬಡಿದಾಡಲೂ ಕಲಿತರು.

೮. **ಮನೋಧೋರಣೆಯಲ್ಲಿನ ಬದಲಾವಣೆ** : ಭಾರತದ ಗ್ರಾಮೀಣನ ಮನೋಧೋರಣೆಯಲ್ಲಿ ಏನು ಬದಲಾ

ವಣೆ ಆಗಿವೆ ಎಂದು ಉತ್ತರಿಸುವುದು ಬಹಳ ಕಷ್ಟದ ಮಾತು. ಆದರೂ ಈ ಪ್ರಯತ್ನ ಮಾಡುವುದು ಅವಶ್ಯ. ಅವನ ಮೌಲ್ಯಗಳೂ ಮನೋಧೋರಣೆಗಳೂ ಬದಲಾಗದೇ ಕೇವಲ ಆರ್ಥಿಕ ರಾಜಕೀಯ ಸನ್ನಿವೇಶಗಳು ಬದಲಾದರೆ ಅದು ಪರಿಣಾಮಕಾರಿಯಾಗುವುದಿಲ್ಲ. ಗ್ರಾಮೀಣನಲ್ಲಿ ಇಂಥ ಬದಲಾವಣೆ ಆಗುತ್ತಿದೆ ಎಂಬುದು ಕೆಲವರ ಮತ. ಉದಾಹರಣೆಗೆ, ಮಾಯೂರ್ ಎಂಬ ಕೇರಳದ ಗ್ರಾಮವೊಂದರ ಸಾಮಾಜಿಕ ಕ್ರಾಂತಿಯನ್ನು ವಿಶ್ಲೇಷಣೆ ಮಾಡಿದ ಡಾ. ಅಯ್ಯಪ್ಪನ್ ಅಲ್ಲಿ ಅಂಥ ಬದಲಾವಣೆಯನ್ನು ಕಂಡಿದ್ದಾರೆ. ಆ ಗ್ರಾಮದವನೊಬ್ಬನು ಹೀಗೆ ಹೇಳಿದನಂತೆ : "ಈ ಹಳ್ಳಿಯಲ್ಲಿ ಸತ್ತವನನ್ನು ಹೂಳುವುದು ಈಗೀಗ ಕಷ್ಟದ ಮಾತಾಗುತ್ತಿದೆ. ಜನರು ತಮ್ಮ ತಮ್ಮ ಕೆಲಸದಲ್ಲಿ ಇಷ್ಟು ತೊಡಗಿರುತ್ತಾರೆಂದರೆ ಶವಸಂಸ್ಕಾರಕ್ಕೆ ಹೋಗುವುದೂ ಬಹಳ ತೊಂದರೆಯ ಕೆಲಸ ಎಂದು ತಿಳಿಯುತ್ತಾರೆ." ಭಾರತದ ಗ್ರಾಮಸ್ಥರು ಹೀಗೆ ಹೇಳುತ್ತಿರುವುದು ನಿಜವಾದರೆ ಅವರ ಮನೋಧೋರಣೆ ಬದಲಾಗುತ್ತಿದೆ ಎಂಬುದರಲ್ಲಿ ಸಂಶಯವಿಲ್ಲ. ಹಿಂದೆ ಹೆಚ್ಚಿನ ಗ್ರಾಮೀಣರು ಬದಲಾವಣೆಯೇ ಪಾಪವೆಂದು ತಿಳಿಯುತ್ತಿದ್ದುದುಂಟು. ಅಂಥವರೇ ಇಂದು ಬದಲಾವಣೆಗಾಗಿ ಘೋಷಣೆಗಳನ್ನು ಕೂಗುತ್ತಿದ್ದಾರೆ. ರೈತರ ಚಳವಳಿಗಳು, ಕೃಷಿ ಕೂಲಿಕಾರರ ಪ್ರತಿಭಟನೆಗಳು ಇದಕ್ಕೆ ಸಾಕ್ಷಿ.

೯. ಕುಗ್ಗುತ್ತಿರುವ ಸಹಕಾರ ಹಾಗೂ ಪರಸ್ಪರಾವಲಂಬನೆ : ಗ್ರಾಮೀಣ ಬದಲಾವಣೆಯ ಇನ್ನೊಂದು ಪರಿಣಾಮ

ವೆಂದರೆ ಸಾಂಪ್ರದಾಯಿಕ ಸಹಕಾರೀ ಶ್ರಮಪದ್ಧತಿಗಳು ಮಾಯವಾಗುತ್ತಿವೆ. ಅಂದರೆ ಗ್ರಾಮೀಣರ ಸಹಕಾರ ಭಾವನೆಗೆ ಧಕ್ಕೆ ಒದಗಿದೆ. ಹಿಂದೆ ನಮ್ಮ ಹಳ್ಳಿಗಳಲ್ಲಿ ಹಲವು ರೈತ ಕುಟುಂಬಗಳು ಒಟ್ಟಾಗಿ ತಮ್ಮಲ್ಲಿರುವ ದನಕರುಗಳನ್ನೂ ಉಪಕರಣಗಳನ್ನೂ ಒಟ್ಟುಗೂಡಿಸಿಕೊಂಡು ಸರತಿಯ ಪ್ರಕಾರ ತಮ್ಮೆಲ್ಲರ ಹೊಲಮನೆಗಳ ಕೆಲಸಮಾಡುವ ಸಂಪ್ರದಾಯವಿತ್ತು. ಅದನ್ನು "ಕೂಡಿ ಮಾಡುವುದು" ಎನ್ನುತ್ತಿದ್ದರು. ಅನೇಕ ರೈತರಿಗೆ ತಮ್ಮ ಬೇಸಾಯಕ್ಕೆ ಬೇಕಾಗುವಷ್ಟು ಆಳುಕಾಳು, ದನಕರು, ನೇಗಿಲುನೊಗಗಳು ಇರುತ್ತಿರಲಿಲ್ಲ. ಇಂಥವರಿಗೆ ಈ ಸಹಕಾರ ಲಾಭದಾಯಕವಾಗಿರುತ್ತಿತ್ತು. ಇದೇ ರೀತಿಯಲ್ಲಿ ರೈತ ಕುಟುಂಬಗಳು ಪರಸ್ಪರ ಆಳುಕಾಳುಗಳನ್ನು ಅಥವಾ ದನಕರುಗಳನ್ನು ಬೇಸಾಯದ ಕಾಲದಲ್ಲಿ ವಿನಿಮಯಮಾಡಿಕೊಳ್ಳುವುದೂ ಸರ್ವೇಸಾಮಾನ್ಯವಾಗಿತ್ತು. ಈ "ಮುಯ್ಯಿ" ಪದ್ಧತಿಯೂ ಈಗ ಮಾಯವಾಗಿದೆ. ಅದರಂತೆಯೇ "ಆಯಾ" "ಬಾರಾ ಬಲೂತಾ" "ಜಜಮಾನಿ" ಮುಂತಾದ ಹೆಸರುಗಳಿಂದ ಕರೆಯಿಸಿಕೊಳ್ಳುತ್ತಿದ್ದ ಪರಸ್ಪರಾವಲಂಬನೆಯ ಪದ್ಧತಿಗಳೂ ಹೆಚ್ಚು ಕಡಿಮೆ ಮಾಯವಾಗಿವೆ. ಪ್ರಾಚೀನ ಕಾಲದಲ್ಲಿ ಇಂಥ ಪದ್ಧತಿಗಳಿಂದ ಕುಟುಂಬಗಳೂ ವೃತ್ತಿಗುಂಪುಗಳೂ ಜಾತಿಗಳೂ ಸಾಮಾಜಿಕ ಹಾಗೂ ಆರ್ಥಿಕವಾಗಿ ಪರಸ್ಪರ ಅವಲಂಬಿಸಿಕೊಂಡಿರುತ್ತಿದ್ದವು. ಆದರೆ ಹಣದ ಚಲಾವಣೆ, ಸ್ಪರ್ಧೆ, ನಗರೀಕರಣ, ಯಂತ್ರಜ್ಞಾನ ಮುಂತಾದ ಪ್ರಭಾವಗಳಿಂದ ಈ ಪರಸ್ಪರಾವಲಂಬನೆ ಕುಗ್ಗಿಹೋಗಿದೆ. ಪ್ರಾಯಶಃ ವಿಶ್ವದ ಎಲ್ಲ ಕಡೆ ಗ್ರಾಮೀಣ

ಸಮಾಜಗಳಲ್ಲಿ ಇಂಥ ಬದಲಾವಣೆಗಳು ಕಂಡುಬರುತ್ತಿರುವಂತೆ ತೋರುತ್ತದೆ. ಪಶ್ಚಿಮ ಆಫ್ರಿಕೆಯ ದಾಹೋಮೆ ಪ್ರಾಂತ, ವೆಸ್ಟ ಇಂಡೀಸಿನ ಹ್ಯಾಟಿ ದ್ವೀಪಗಳು, ಪನಾಮಾ, ಮೆಕ್ಸಿಕೊ ಮುಂತಾದ ಕಡೆಗಳಲ್ಲೂ ಹಿಂದಿನ ಕಾಲದಲ್ಲಿ ಇದ್ದ ಕಾಂಬ್ಯಾಟ್, ಜಂಟಾ, ಪ್ಯನಡಾ ಮುಂತಾದ ಸಹಕಾರಿ ಪದ್ಧತಿಗಳು ಮಾಯ ವಾಗಿರುವುದಾಗಿ ಮಾನವಶಾಸ್ತ್ರಜ್ಞರು ವರದಿ ಮಾಡಿದ್ದಾರೆ. ಈ ಸಾಂಪ್ರದಾಯಿಕ ಸಹಕಾರ ಪದ್ಧತಿಗಳ ಬದಲಿಗೆ ಈಗ ಹೊಸ ಸಹಕಾರಿ ಸಂಸ್ಥೆಗಳೂ ಪದ್ಧತಿಗಳೂ ಬಂದಿವೆಯೇನೋ ನಿಜ; ಅವಿನ್ನೂ ಗ್ರಾಮೀಣ ನೆಲೆಯಲ್ಲಿ ತಳವೂರಿಲ್ಲ.

೧೦. ಶಿಥಿಲಗೊಂಡ ಏಕತಾಭಾವನೆ, ಸಮಗ್ರತೆ : ಹಳ್ಳಿಯು ತನ್ನವರಿಗೆ ಒಂದು ಚಿಕ್ಕ ವಿಶ್ವ. ಬೇರೆಯವರಿಂದ ಪ್ರತ್ಯೇಕವಾಗಿರುವದರಿಂದಲೂ ಸಮಾನ ಸುಖದುಃಖಗಳಲ್ಲಿ ಪಾಲ್ಗೊಳ್ಳುವುದರಿಂದಲೂ ಗ್ರಾಮಸ್ಥರಲ್ಲಿ ಒಂದು ತೆರನಾದ ಏಕತೆಯ ಭಾವನೆ ಬೆಳೆದು ಬರುವುದು ಸಹಜವಾಗಿತ್ತು. ಜಾತಿ ಭಾವನೆಯಿಂದ ಗ್ರಾಮದ ಜನರು ಬೇರೆ ಬೇರೆ ಪಂಗಡಗಳಂತೆ ವರ್ತಿಸಿದರೂ ಗ್ರಾಮದ ಸಲುವಾಗಿ ಒಂದಾಗಿ ಕೆಲಸ ಮಾಡ ಬೇಕೆಂಬ ಭಾವನೆ ಅವರಲ್ಲಿ ಇರುತ್ತಿತ್ತು. ಗ್ರಾಮದ ಜಾತ್ರೆ, ಗ್ರಾಮದ ಗುಡಿ, ಗ್ರಾಮದ ಗರಡಿ-ಪೈಲ್ವಾನರು, ಗ್ರಾಮದ ಮರ್ಯಾದೆ ಎಂದು ಮುಂತಾಗಿ ಹಲವು ಕಾರಣಗಳಿಗಾಗಿ ಜನರು ಒಗ್ಗೂಡುತ್ತಿದ್ದರು. ಈ ಸಮಗ್ರತೆಯ ಭಾವನೆ ಈಗ ನಿಶ್ಚಯ ವಾಗಿಯೂ ಶಿಥಿಲವಾಗಿದೆಯೆಂದು ವರದಿಗಳು ಹೇಳುತ್ತವೆ.

೧೧. ನಗರೀಕರಣದ ಪ್ರಭಾವ: ಭಾರತದಲ್ಲಿ ನಗರೀಕರಣದ ಗತಿಯು ಬಹಳ ನಿಧಾನ ಎಂಬ ಮಾತು ಎಲ್ಲರಿಗೂ ಗೊತ್ತು. ನಮ್ಮಲ್ಲಿ ಪಾಶ್ಚಿಮಾತ್ಯ ಸಮಾಜಗಳಲ್ಲಿ ಆದಂಥ ನಗರೀಕರಣ ಆಗಿಲ್ಲ. ಅಲ್ಲಿ ನಗರ ಮತ್ತು ಗ್ರಾಮಗಳ ಅಂತರಗಳು ಕಡಿಮೆಯಾಗುತ್ತಿವೆ. ನಗರೀಕರಣದ ಬುಲ್ಡೋಜರುಗಳು ಅಲ್ಲಿನ ಸಾಂಪ್ರದಾಯಿಕ ಗ್ರಾಮಗಳನ್ನು ಹೆಚ್ಚು ಕಡಿಮೆ ನೆಲಸಮ ಮಾಡಿದೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಭಾರತದಲ್ಲಿ ಇಂಥ 'ಗ್ರಾಮೀಣ ಕ್ರಾಂತಿ' ಆಗಿಲ್ಲ. ಆದರೂ ನಿಧಾನವಾಗಿ ನಗರೀಕರಣವು ಗ್ರಾಮಗಳನ್ನು ತನ್ನ ತೆಕ್ಕೆಯೊಳಗೆ ಎಳೆದುಕೊಳ್ಳುವ ಹವಣಿಕೆಯಲ್ಲಿದೆ. ನಗರ ಜೀವನದ ಮೌಲ್ಯಗಳು ಮಾರ್ಗಗಳೂ ಗ್ರಾಮದ ಮೇಲೆ ಇನ್ನೂ ಪೂರ್ಣಪ್ರಮಾಣದ ದಾಳಿಯನ್ನು ಮಾಡಿಲ್ಲವಾದರೂ ನಗರದ ಸವಲತ್ತುಗಳೂ ಅನಿಷ್ಟಗಳೂ ಗ್ರಾಮಗಳಲ್ಲಿ ಪ್ರವೇಶಿಸಿವೆ. ಸದ್ಯ ಆದೆಷ್ಟೋ ಹಳ್ಳಿಗಳಲ್ಲಿ ಪೇಟೆಯ ಗಡಂಗುಗಳು, ಹೊಟೇಲುಗಳು, ದುಂದು, ಜೂಜು, ಅಪರಾಧ ಇವೆಲ್ಲ ತಮ್ಮ ಹಾವಳಿ ನಡೆಸಿವೆ. ನಗರೀಕರಣದಿಂದ ಗ್ರಾಮೀಣ ಕುಟುಂಬ ಹಾಗೂ ಬಂಧು-ಬಳಗ ಭಾವನೆಯ ಮೇಲೂ ನಿಧಾನವಾಗಿ ಒತ್ತಡಗಳು ಬೀಳುತ್ತವೆ. ಪೇಟೆಗಾಗಿ ಹಳ್ಳಿಗರು ಹಣದ ಬೆಳೆಗಳನ್ನು ಬೆಳೆಯುತ್ತಿದ್ದಾರೆ. ಕೆಲಸಗಾರರು ಕುಟುಂಬದ ಹೊರಗೆ ಬರುತ್ತಿದ್ದಾರೆ. ಇದರಿಂದ ಕುಟುಂಬದ ನಂಟು, ಬಂಧು-ಬಳಗದ ನಂಟುಗಳು ಒಂದಿಷ್ಟಾದರೂ ಕಡಿಮೆಯಾಗುವ ಸಾಧ್ಯತೆಗಳಿವೆ. ಇನ್ನೊಂದು ಪರಿಣಾಮವೆಂದರೆ ನಗರೀಕರಣದಿಂದಾಗಿ ಗ್ರಾಮದ ಸಾಂಪ್ರದಾಯಿಕ

ಕಸುಬುಗಳು ಮೂಲೆಗುಂಪಾಗಿವೆ. ಜಾತಿಯನ್ನು ಆಧರಿಸಿದ ವೃತ್ತಿಗಳು ತಮ್ಮ ಮಹತ್ವವನ್ನು ಕಳೆದುಕೊಂಡಿವೆ.

೧೨. ಹೆಚ್ಚುತ್ತಿರುವ ಆಶೋತ್ತರಗಳು, ಅಸಮಾಧಾನಗಳು : ಅಭಿವೃದ್ಧಿ ಯೋಜನೆಗಳು, ಬೆಳೆಯುತ್ತಿರುವ ಶಿಕ್ಷಣ, ಹೊಸ ಶಾಸನಗಳು, ಭೂ-ಸುಧಾರಣೆ, ಪ್ರಜಾಪ್ರಭುತ್ವ ಆಡಳಿತ ಪದ್ಧತಿ ಮುಂತಾದ ಹಲವು ಸಂಗತಿಗಳು ಗ್ರಾಮೀಣ ಜನರಲ್ಲಿ ಹೊಸ ಆಶೋತ್ತರಗಳನ್ನು ಪ್ರತೀಕ್ಷೆಗಳನ್ನು ಮೂಡಿಸಿವೆ. ಅವರಿಗೆ ತೀವ್ರಗತಿಯ ಆರ್ಥಿಕ ಅಭಿವೃದ್ಧಿ ಬೇಕು, ಸವಲತ್ತುಗಳು ಬೇಕು, ಹಸಿರು ಕಾಂತ್ರಿ ಬೇಕು. ಅವೆಲ್ಲವನ್ನು ಸರಕಾರವೆಂಬ ಅದ್ಭುತ ಯಂತ್ರವು ಹೇಗೋ ತಂದುಕೊಡುತ್ತದೆಂದು ಹಲವರು ಭಾವಿಸಿದಂತಿದೆ ಹಲವರಿಗೆ ಅಭಿವೃದ್ಧಿಯ ಫಲಗಳು ಈಗಿಂದೀಗಲೇ ಬೇಕು. ಯಾರದೋ ಗಿರಣಿ ನಡೆಸಲಿಕ್ಕೆ ವಿದ್ಯುತ್‌ಶಕ್ತಿ ಕೊಡಲು ನಮ್ಮ ನದಿಗಳಿಗೆ ಒಡ್ಡುಕಟ್ಟಬೇಡಿ ಎಂದು ಅವರು ಪ್ರತಿಭಟಿಸುತ್ತಿದ್ದಾರೆ. ಆ ಒಡ್ಡಿನಿಂದ ಈಗಿಂದೀಗ ಇಲ್ಲೇ ಲಾಭವಾಗುವಂತಿರಬೇಕು ಎಂಬುದು ಅವರ ಆಶಯ.

೧೩. ಹೊಸ ನಾಯಕತ್ವ ; ಗ್ರಾಮಗಳಲ್ಲಿ ಸಾಂಪ್ರದಾಯಿಕವಾಗಿ ಮೇಲ್ಜಾತಿಯ ಜನರು, ಅದರಲ್ಲೂ ಶ್ರೀಮಂತ ಭೂಮಾಲಿಕ ಕುಟುಂಬಗಳಿಗೆ ಸೇರಿದವರು ಮುಂದಾಳುಗಳಾಗಿದ್ದರು. ಇವರಲ್ಲಿ ಹೆಚ್ಚಿನವರು ವೃದ್ಧರೂ ಕುಟುಂಬದ

ಹಿರಿಯರೂ ಇರುತ್ತಿದ್ದರು. ಅವರಿಗೆ ಸಂಪ್ರದಾಯದ ಮೇಲೆ ಶ್ರದ್ಧೆ ಹೆಚ್ಚು. ಗ್ರಾಮೀಣ ಪ್ರದೇಶದ ಹೊಸ ನಾಯಕರು ಹೆಚ್ಚಾಗಿ ಯುವಕರು: ಅದರಲ್ಲೂ ಸುಶಿಕ್ಷಿತರಾದ ಯುವಕರು. ಇವರು ಎಲ್ಲ ಜಾತಿ ಹಾಗೂ ವರ್ಗಗಳಿಂದ ಬರುತ್ತಿದ್ದಾರೆ. ಇವರಿಗೆ ಸಂಪ್ರದಾಯದ ಮೇಲೆ ಹೆಚ್ಚಿನ ಮೋಹವೇನೂ ಇಲ್ಲ. ಇವರಿಗೆ ವಿಜ್ಞಾನ, ಯಂತ್ರಜ್ಞಾನಗಳ ಬಗ್ಗೆ ಗೌರವವಿದೆ. ಹಾಗೆಯೇ ಯೋಜನೆಗಳ ಬಗೆಗೂ ಅಷ್ಟಿಷ್ಟು ನಂಬಿಕೆಯಿದೆ. ಆದರೆ ಮಾವು ಬಿತ್ತಿ ಬೇವು ಬೆಳೆಯುತ್ತಿರುವುದನ್ನು ನೋಡಿ ಅವರಿಗೆ ನಿರಾಶೆಯಾಗಿದೆ. ಈ ಹೊಸ ಪೀಳಿಗೆಯ ಜನರಿಗೆ ಹಿಂದಿನವರ ತಾಳ್ಮೆ ಇಲ್ಲ. ತಮ್ಮ ರಾಜಕೀಯ ನಾಯಕರು, ಕಂಟ್ರಾಕ್ಟರರು, ಸರಕಾರದ ಅಧಿಕಾರಿಗಳು ಯೋಜನೆ ಹಾಗೂ ಅಭಿವೃದ್ಧಿಯ ಹೆಸರಿನಲ್ಲಿ ಸಂಪತ್ತನ್ನು ದೋಚಿಕೊಳ್ಳುವುದನು ಕಂಡು ಅವರಿಗೆ ರೋಸಿ ಹೋಗಿದೆ. ಇವರಲ್ಲಿ ನಿರಾಶರಾದ ಕೆಲವರು ಬಂಡಾಯಕ್ಕೆ ಸಿದ್ಧರಾಗಿದ್ದಾರೆ. ರೈತರ, ಕೂಲಿಕಾರರ, ವಾಮಪಂಥಿಗಳ ಸಂಘಟನೆಗಳಲ್ಲಿ ಸೇರಿಕೊಳ್ಳುತ್ತಿದ್ದಾರೆ. ಮತ್ತೆ ಕೆಲವರಿಗೆ ಇಂಥ ಸಂಘಟನೆಗಳಲ್ಲೂ ನಂಬಿಕೆಯಿಲ್ಲ. ಅವರು ಸುಲಭವಾದ ಯಾವುದಾದರೂ ವಾಮಮಾರ್ಗಕ್ಕೆ ಸಿದ್ಧರಿದ್ದಾರೆ. ಒಟ್ಟಿನಲ್ಲಿ ತಾವು ಗೆದ್ದರಾಯಿತು ಎಂಬುದು ಅವರ ಧೋರಣೆ. ಇಂಥವರು ಹಳ್ಳಿಗಾಡಿನಲ್ಲಿ ಅಶಾಂತಿ, ಅಶಿಸ್ತು, ಅಪರಾಧಗಳಿಗೆ ಬೀಜ ಬಿತ್ತುತ್ತಿದ್ದಾರೆ. ರಾಜಕೀಯ ನಾಯಕರು, ರೈತ ಚಳು ವಳಿಗಳ ಸಂಘಟಿಕರು, ಸರಕಾರೀ ಅಧಿಕಾರಿಗಳು ಹಾಗೂ ಸಮಾಜ ವಿಜ್ಞಾನಿಗಳು ಈ ಬೆಳವಣಿಗೆಯನ್ನು ಕೂಲಂಕಷವಾಗಿ

ತಿಳಿದುಕೊಳ್ಳುವ ಹಾಗೂ ಆದಷ್ಟು ಬೇಗನೇ ಅದಕ್ಕೆ ಪರಿಹಾರೋಪಾಯಗಳನ್ನು ಹುಡುಕುವ ಪ್ರಯತ್ನ ಮಾಡಬೇಕು.

೩. ಬದಲಾವಣೆಯ ಪ್ರೇರಣೆಗಳು ಹಾಗೂ ಪ್ರಯತ್ನಗಳು

ಕಳೆದ ಅರ್ಧಶತಮಾನದ ಅವಧಿಯಲ್ಲಿ ಭಾರತದ ಗ್ರಾಮಾಂತರ ಪ್ರದೇಶದಲ್ಲಿ ಸಾಮಾಜಿಕ ಸ್ಥಿತ್ಯಂತರಗಳು ನಡೆಯುತ್ತಿವೆ ಎಂಬ ಮಾತನ್ನು ಈಗ ಎಲ್ಲರೂ ಒಪ್ಪಿಕೊಳ್ಳಬಹುದು. ಈ ಐವತ್ತು ವರ್ಷಗಳಲ್ಲೇ ಏಕೆ, ಅದಕ್ಕೆ ಮುಂಚೆಯೂ ಅಷ್ಟಿಷ್ಟಾಗಿ ಬದಲಾವಣೆಗಳು ಆಗಿರಲೇಬೇಕು. ನಾವು ಈಗ ಗ್ರಾಮೀಣ ಸಮಸ್ಯೆಗಳ ಬಗ್ಗೆ, ಅಲ್ಲಿನ ಪಂಚಾಯತಿ ಜಗಳಗಳ ಬಗ್ಗೆ, ಅಪ್ರಮಾಣಿಕರಾದ ಅಥವಾ ಅಸಂತುಷ್ಟರಾದ ಮುಂದಾಳುಗಳ ಬಗ್ಗೆ ಮಾತನಾಡುತ್ತಿದ್ದೇವೆ. ಇವು ಈ ಶತಮಾನಕ್ಕೇ ಮೀಸಲಾದ ಸಮಸ್ಯೆಗಳೆಂದು ತಿಳಿಯಬಾರದು. ೧೦ ನೇ ಶತಮಾನದ ಶಿಲಾಶಾಸನವೊಂದರಲ್ಲಿ ಯಾರು ಪಂಚಾಯತಿಗಳ ಸದಸ್ಯರಾಗಬಾರದು ಎಂದು ಹೇಳಲಾಗಿದೆ. ಅಲ್ಲಿ ಹೇಳಿದ ಅನರ್ಹತೆಗಳು ಇಂದಿನ ಪಂಚಾಯತಿ ರಾಜಕಾರಣಕ್ಕೆ ಬರೆದ ಟೀಕೆಯಂತಿವೆ. ಆ ಶಾಸನದಲ್ಲಿ 'ಗ್ರಾಮ ಕೀಟಕ' ರ ಬಗ್ಗೆ ಪ್ರಸ್ತಾಪವಿದೆ. ಆ ಕೀಟಕರ ಸಂತಾನ ಆಗಲೂ ಇತ್ತು. ಈಗಲೂ ಇದೆ. ಪ್ರಾಯಶಃ ಅದು ಈಗ ಹೆಚ್ಚಾಗಿರಬಹುದು.

ಈ ಉಪನ್ಯಾಸದಲ್ಲಿ ನಾವು ಬಹುಪ್ರಾಚೀನ ಕಾಲದಿಂದ ಈ ದಶಕದವರೆಗೆ ಭಾರತೀಯ ಗ್ರಾಮದಲ್ಲಿ ಏನೇನು ಬದಲಾವಣೆಗಳು ಸಂಭವಿಸಿವೆ ಎಂದು ವಿಚಾರಿಸುವ ಉದ್ದೇಶವನ್ನು ಇಟ್ಟುಕೊಂಡಿಲ್ಲ. ಇತ್ತೀಚೆಗಿನ ನಾಲ್ಕೈದು ದಶಕಗಳಲ್ಲಿ ಉಂಟಾದ ಬದಲಾವಣೆಗಳಾವುವು; ಅವುಗಳಿಗೆ ಪ್ರೇರಣೆಗಳೇನು; ಅವುಗಳ ಪರಿಣಾಮಗಳೇನು ಎಂಬಷ್ಟೇ ವಿಷಯಗಳನ್ನು ಚರ್ಚಿಸಲು ಉದ್ದೇಶಿಸಿದ್ದೇವೆ. ಅದಕ್ಕೂ ಹಿಂದಿನ ಬದಲಾವಣೆಗಳನ್ನು ಸ್ಥೂಲವಾಗಿ ಪ್ರಸ್ತಾಪಿಸುವುದಾದರೆ, ಮುಸ್ಲಿಮ ಆಡಳಿತ ಕಾಲದಲ್ಲಿ ಗ್ರಾಮಗಳ ರಚನೆಯು ಸಾಮಾನ್ಯವಾಗಿ ಅಬಾಧಿತವಾಗಿಯೇ ಉಳಿಯಿತೆಂದರೆ ತಪ್ಪಿಲ್ಲ. ಮುಸಲ್ಮಾನ ರಾಜರು ನಗರಗಳ ಬಗ್ಗೆ ವಿಶೇಷ ಒಲವುಳ್ಳವರಾಗಿದ್ದರು. ಅವರು ಗ್ರಾಮದ ವಿಷಯದಲ್ಲಿ ಕೈಹಾಕಲಿಲ್ಲ. ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳು ಹೆಚ್ಚುಕಡಿಮೆ ಸ್ವತಂತ್ರವಾಗಿದ್ದವು. ಆದರೂ ಗ್ರಾಮಪಂಚಾಯಿತಿಗಳು ಹಿಂದಿನ ಉಚ್ಛ್ರಾಯಸ್ಥಿತಿಯಲ್ಲಿರಲಿಲ್ಲ. ಮೊಗಲ ಆಡಳಿತಗಾರರು ಅವುಗಳನ್ನು ಸುಧಾರಿಸುವ ಗೊಡವೆಗೆ ಹೋಗಲಿಲ್ಲ. ಹಾಗೆಯೇ ಅವುಗಳನ್ನು ಪೂರ್ಣವಾಗಿ ಮುರಿಯುವ ಗೊಡವೆಗೂ ಹೋಗಲಿಲ್ಲ. ಆದರೆ ಅವರು ತಮ್ಮ ಆಡಳಿತೆಯ ಕಡೆ ಕೆಲವು ಆಡಳಿತಾತ್ಮಕ ಬದಲಾವಣೆಗಳನ್ನು ತಂದರು. ಮುಖ್ಯವಾಗಿ ಭೂಕಂದಾಯ ವಸೂಲಿ, ಮಧ್ಯವರ್ತಿಗಳ ನೇಮಕ ಇತ್ಯಾದಿ ವಿಷಯಗಳಲ್ಲಿ ಅವರು ಕೈಹಾಕಿದರು.

ಮುಂದೆ ಬ್ರಿಟಿಷ ಕಾಲದಲ್ಲಿ ಪ್ರಾಯಶಃ ಹಿಂದೆಂದಿಗಿಂತ ಹೆಚ್ಚಿನ ಬದಲಾವಣೆಗಳು ಆದವು. ಬ್ರಿಟಿಷ ಸಂಸ್ಕೃತಿ, ಶಿಕ್ಷಣ, ಕಾಯ್ದೆ ಕಾನೂನು, ಕೋರ್ಟು ಕಚೇರಿಗಳು, ಸಾರಿಗೆ ಸಂಪರ್ಕ ವ್ಯವಸ್ಥೆ, ತೆರಿಗೆ ಹಾಗೂ ಕಂದಾಯ ವಸೂಲಿ ಪದ್ಧತಿ, ಹೊಸ ಯಂತ್ರತಂತ್ರ, ಕಾರ್ಖಾನೆ ಹಾಗೂ ನಗರಗಳ ಉದಯ, ರೈತವಾರಿ ಪದ್ಧತಿ ಮುಂತಾದ ಅನೇಕ ಅಂಶಗಳಿಂದ ಭಾರತೀಯ ಗ್ರಾಮದ ಮೇಲೆ ಹಲವು ವಿಧವಾದ ಪರಿಣಾಮಗಳಾದುವು. ಬ್ರಿಟಿಷ ಶಿಕ್ಷಣವು ನಗರಗಳಲ್ಲಿರುವ ಕಚೇರಿ ಕಾರ್ಖಾನೆಗಳಿಗೆ ಕಾರಕೂನರನ್ನು ಹಾಗೂ ಕೆಲಸಗಾರರನ್ನು ತಯಾರುಮಾಡಿತು; ಗ್ರಾಮೀಣ ಮೌಲ್ಯಗಳನ್ನು ಮತ್ತು ಕೌಶಲ್ಯಗಳನ್ನು ಅಪಮೌಲ್ಯಗೊಳಿಸಿತು. ಬ್ರಿಟಿಷ ಕಾಯ್ದೆ ಕಾನೂನುಗಳು ಬಂದವು. ಅವು ಗ್ರಾಮೀಣರ ಸ್ಥಳೀಯ ಸಂಪ್ರದಾಯ ಹಾಗೂ ಕಟ್ಟಳೆಗಳನ್ನು ದುರ್ಬಲಗೊಳಿಸಿದವು. ಇವೆಲ್ಲಕ್ಕಿಂತ ಹೆಚ್ಚಾಗಿ ಬ್ರಿಟಿಷ ಆಡಳಿತೆಯ ಕಾಲದಲ್ಲಿ ವಸ್ತುವಿನಿಮಯ ಪದ್ಧತಿ ಹೆಚ್ಚುಕಡಿಮೆ ಮಾಯವಾಗಿ ಹಣಚಲಾವಣೆಯು ಪ್ರಚಲಿತವಾದುದನ್ನು ಹೇಳಲೇಬೇಕು. ಹಣಚಲಾವಣೆಯಿಂದಾಗಿ ರೈತರು ಪೇಟೆಗಳಿಗಾಗಿ ಬೆಳೆಗಳಿಗಾಗಿ ಬೆಳೆಯುವುದನ್ನು ರೂಢಿಸಿಕೊಂಡರು. ಹಳ್ಳಿಗಳು ಪೇಟೆಗಳೊಂದಿಗೆ ಹೆಣೆದುಕೊಂಡವು. ರೈತರು ಸಾಂಪ್ರದಾಯಿಕ ಆಹಾರದ ಬೆಳೆಗಳ ಬದಲಿಗೆ ಹಣದ ಬೆಳೆಗಳನ್ನು ಬೆಳೆಯುವುದೂ ಪ್ರಾರಂಭವಾಯಿತು. ಗ್ರಾಮದೊಳಗೆ ಹಣದ ಲೇವಾದೇವಿ ಪ್ರಾರಂಭವಾದ ಮೇಲೆ ಆಯಗಾರಿಕೆ, ಮುಯ್ಯ, ಕೂಡಿ ಮಾಡುವುದು ಮುಂತಾದ ಪರಸ್ಪರ ಸಹಕಾರ ಪದ್ಧತಿಗಳಿಗೆ ಧಕ್ಕೆ ಒದಗಿತು.

ವಿಜ್ಞಾನ ಯಂತ್ರಜ್ಞಾನಗಳೂ ಗ್ರಾಮೀಣ ಬದಲಾವಣೆಗೆ ಸಹಯೋಗ ಸಲ್ಲಿಸಿದವು ಎಂದರೆ ತಪ್ಪಿಲ್ಲ. ಅವು ಗ್ರಾಮೀಣರಿಗೆ ಶ್ರಮ ಉಳಿಸುವ ಸಾಧನಗಳನ್ನು ಕೊಟ್ಟವು. ವಿದ್ಯುತ್ತಿನಿಂದ ನಡೆಯುವ ಹಿಟ್ಟಿನ ಗಿರಣಿ ಬಂದ ಮೇಲೆ ಹಳ್ಳಿಯ ಹೆಣ್ಣು ಮಕ್ಕಳು ಕುಟ್ಟುವುದು, ಬೀಸುವುದು ತಪ್ಪಿತು. ಎತ್ತಿನ ಬಂಡಿಯ ಬದಲಿಗೆ ಬೈಸಿಕಲ್ಲು, ರಿಕ್ಷಾ ಗಾಡಿ, ಬಸ್ಸುಗಳು ಬಂದು ಸಾರಿಗೆ ಸಂಪರ್ಕ ಹೆಚ್ಚು ಸುಗಮವಾಯಿತು. ರಸ್ತೆ, ರೈಲು ಅಂಚೆತಂತಿ ರೇಡಿಯೋ ಮುಂತಾದವೂ ಬದಲಾವಣೆಗಳಿಗೆ ಪ್ರೇರಣೆಕೊಟ್ಟವು. ಈ ಎಲ್ಲ ಹೊಸ ಸಂಗತಿಗಳು ಗ್ರಾಮೀಣರ ಮನೋಧರ್ಮದ ಮೇಲೆ ಕಿಂಚಿತ್ತಾದರೂ ಪರಿಣಾಮ ಬೀರಿರಲೇಬೇಕು. ಇದೇ ಹೊತ್ತಿಗೆ ನಡೆದ ಇನ್ನೊಂದು ಸಂಗತಿಯನ್ನೂ ಪ್ರಸ್ತಾಪ ಮಾಡಬೇಕು. ಅದೇನೆಂದರೆ ಈ ಕಾಲದಲ್ಲಿ ನಿಧಾನವಾಗಿಯಾದರೂ ನಗರೀಕರಣ ಪ್ರಾರಂಭವಾಯಿತು. ಇದರ ಪ್ರಭಾವವು ಗ್ರಾಮೀಣ ಜಗತ್ತಿನ ಮೇಲೆ ಹಂತ ಹಂತವಾಗಿ ಗೋಚರಿಸಿತು.

ಗ್ರಾಮೀಣ ಬದಲಾವಣೆಗೆ ಕೆಲವು ಬ್ರಿಟಿಷ ಆಡಳಿತಗಾರು ವೈಯಕ್ತಿಕವಾಗಿಯೂ ಪ್ರೇರಣೆ ಕೊಟ್ಟರು. ಇವರಲ್ಲಿ ಕೆಲವರು ಭಾರತೀಯ ಗ್ರಾಮಗಳನ್ನು ಹಿಂದುಳಿಯುವಿಕೆಯ ಸಂಕೇತಗಳೆಂದು ಭಾವಿಸಿ ಅವುಗಳನ್ನು ಬುದ್ಧಿಪೂರ್ವಕವಾಗಿ ಬದಲಿಸಲು ನಿಶ್ಚಯಿಸಿದರು. ಮತ್ತೆ ಕೆಲವರು ಈ ಗ್ರಾಮಗಳೇ ಭಾರತೀಯ ಸಂಸ್ಕೃತಿಯ ಪರಮ ಪ್ರತೀಕಗಳೆಂದು ತಿಳಿದು ಅವುಗಳ ಪುನರು

ಜ್ಜೀವನ ಮಾಡಲು ಬಯಸಿದರು. ಈ ನಡುವೆ ಬ್ರಿಟಿಷರ ಆರ್ಥಿಕ ಧೋರಣೆಗಳಿಂದಾಗಿ ಗ್ರಾಮದ ಗೃಹಕೈಗಾರಿಕೆಗಳು ನಶಿಸುತ್ತ ಹೋದವು. ಬ್ರಿಟಿಷರ ದೃಷ್ಟಿಯಲ್ಲಿ ಗ್ರಾಮಗಳು ಬ್ರಿಟಿಷ ಸಾಮ್ರಾಜ್ಯಕ್ಕೆ ಕಚ್ಚಾ ಸಾಮಗ್ರಿಗಳನ್ನು ಒದಗಿಸುವ ಹಾಗೂ ಬ್ರಿಟಿಷ ಸಿದ್ಧವಸ್ತುಗಳನ್ನು ಕೊಳ್ಳುವ ಪೇಟೆಗಳಾದವು.

ಇಪ್ಪತ್ತನೆಯ ಶತಮಾನದ ಮೊದಲ ದಶಕಗಳಲ್ಲಿ ದೇಶ ಪ್ರೇಮಿಗಳಾದ ನಾಯಕರು, ಉದ್ದಿಮೆದಾರರು, ಅರ್ಥಶಾಸ್ತ್ರಜ್ಞರು ಭಾರತದ ಆರ್ಥಿಕ ಪುನರ್ ರಚನೆಯ ಬಗ್ಗೆ ವಿಚಾರಮಾಡ ಹತ್ತಿದರು. ಅವರ ಅಭಿಪ್ರಾಯದಲ್ಲಿ ಗ್ರಾಮೀಣ ವಿಕಾಸವು ಅತ್ಯವಶ್ಯಕವೆನಿಸಿತು. ಹೀಗೆ ಸ್ವಾತಂತ್ರ್ಯ ಸಿಗುವ ಮುಂಚೆಯೇ ಗ್ರಾಮಾಂತರ ಪ್ರದೇಶದ ಯೋಜಿತ ಅಭಿವೃದ್ಧಿಯ ಬಗ್ಗೆ ಕಳಕಳಿ ಇತ್ತು. ರವೀಂದ್ರನಾಥ ಠಾಕೂರರ ಶ್ರೀನಿಕೇತನ ಹಾಗೂ 'ಪಲ್ಲಿ ಸಮಾಜ' ಚಳವಳಿ ಇವುಗಳು ಇಂಥ ಕಳಕಳಿಯ ಜೀವಂತ ನಿದರ್ಶನಗಳಾಗಿವೆ. ಎಫ್. ಎಲ್. ಬ್ರೈನ್ ಎಂಬ ಆಂಗ್ಲ ಅಧಿಕಾರಿಯು ಗುರಗಾಂವ್‌ದಲ್ಲಿ ೧೯೨೦ ರ ಸುಮಾರಿಗೆ ನಡೆಸಿದ 'ಮಾದರಿ ಗ್ರಾಮಗಳು' (ಬೆಟರ್ ವ್ಹಿಲೇಜಿಸ್) ಎಂಬ ಪ್ರಯೋಗ, ಹ್ಯಾಚ್ ಎಂಬವನು ದಕ್ಷಿಣ ತಿರುವಾಂಕೂರಿನ ಮಾರ್ತಾಂಡಮ್‌ದಲ್ಲಿ ೧೯೨೧ ರಲ್ಲಿ ನಡೆಸಿದ ಗ್ರಾಮೀಣ ವಿಕಾಸದ ಪ್ರಯೋಗ, ಗಾಂಧೀಜಿಯವರು ವಾರ್ಧಾ ಮತ್ತು ಸಾಬರಮತಿಗಳಲ್ಲಿ ನಡೆಸಿದ ಪ್ರಸಿದ್ಧವಾದ 'ರಚನಾತ್ಮಕ' ಕಾರ್ಯಕ್ರಮ, ಅಥವಾ ಕೃಷ್ಣಮಾಚಾರಿಯವರು ಬರೋಡಾ

ದಲ್ಲಿ ೧೯೩೨ ರ ಸುಮಾರಿಗೆ ಪ್ರಾರಂಭಿಸಿದ ಗ್ರಾಮೀಣ ಅಭಿವೃದ್ಧಿಯ ಪ್ರಯತ್ನಗಳು ಗ್ರಾಮೀಣ ವಿಕಾಸದ ಶಕ್ತಿನ್ಯೂನತೆಗಳನ್ನು ಅಂದಾಜು ಮಾಡುವ ಪ್ರಯೋಗಾಲಯಗಳಂತೆ ಕೆಲಸ ಮಾಡಿದವು. ಬ್ರೈನನ ಪ್ರಯೋಗ ಹುಟ್ಟುತ್ತಲೇ ಸತ್ತಿತು. ಅದು ಯಾವ ಪರಿಣಾಮವನ್ನೂ ಬೀರಲಿಲ್ಲ. ಹ್ಯಾಚ್ ಮತ್ತು ಕೃಷ್ಣಮಾಚಾರಿಯವರ ಪ್ರಯತ್ನಗಳೂ ಹೇಳಿಕೊಳ್ಳುವಂಥ ಯಶ ಪಡೆಯಲಿಲ್ಲ. ಠಾಕೂರರು ವಿಶ್ವಭಾರತಿ ವಿಶ್ವವಿದ್ಯಾಲಯದ ಪರಿಸರದಲ್ಲಿ ಹೊಸಬಗೆಯ ಗ್ರಾಮಗಳನ್ನು ತರಲು ಯತ್ನಿಸಿದ್ದರು. ಸ್ವಾವಲಂಬನೆ, ಸ್ವಪ್ರಯತ್ನ, ಸುಧಾರಿತ ಕೃಷಿ, ಗ್ರಾಮೋದ್ಯೋಗ, ಸಹಕಾರಿ ಸಂಘಗಳ ಸುತ್ತ ಗ್ರಾಮೀಣ ಸಮುದಾಯಗಳನ್ನು ಬೆಳೆಸುವ ಪ್ರಯತ್ನ ಅವರದಾಗಿತ್ತು. ಈ ಪ್ರಯತ್ನ ಶ್ರೀ ನಿಕೇತನ ಸಮುದಾಯದ ಮಟ್ಟಿಗೆ ಯಶಸ್ವಿಯಾಯಿತು. ಆದರೆ ಶ್ರೀ ನಿಕೇತನದಂಥ ಹಳ್ಳಿಗಳನ್ನು ಸುತ್ತಲಿನ ಹಳ್ಳಿಗಳು ಅನುಸರಿಸಲಿಲ್ಲ. ಹೀಗಾಗಿ ಠಾಕೂರರು ಮಾದರಿ ಗ್ರಾಮ ಹೊರಗಿನಿಂದ ಬಂದು ನೋಡುವವರಿಗೆ ಒಂದು ಪ್ರದರ್ಶನದ ವಸ್ತುವಾಯಿತೇ ವಿನಾ ಭಾರತದ ಲಕ್ಷಗಟ್ಟಲೆ ಹಳ್ಳಿಗಳ ಮೇಲೆ ಪ್ರಭಾವ ಬೀರಲಿಲ್ಲ.

ಸ್ವಾತಂತ್ರ್ಯ ನಂತರ ಕಾಲದ ಗ್ರಾಮೀಣ ಪರಿವರ್ತನೆಯನ್ನು ಪ್ರಸ್ತಾಪ ಮಾಡುವಾಗ ಸಮುದಾಯ ವಿಕಾಸ ಯೋಜನೆಗಳ ಪ್ರಸ್ತಾಪ ಮಾಡುವುದು ಅನಿವಾರ್ಯವಾಗಿದೆ. ಆದರೆ

ಸಮುದಾಯ ವಿಕಾಸ ಯೋಜನೆಗಳಿಗಿಂತಲೂ ಮೊದಲು ನಡೆದ ಕೆಲವು ಪೂರ್ವಭಾವೀ ಪ್ರಯತ್ನಗಳ ಬಗ್ಗೆಯೂ ಸ್ವಲ್ಪ ತಿಳಿದು ಕೊಳ್ಳೋಣ. ಇವುಗಳ ಪ್ರೇರಣೆ ಹೆಚ್ಚಾಗಿ ರಾಜ್ಯ ಸರಕಾರ ಗಳಿಂದ ಬಂದಿತು. ಮದ್ರಾಸು ಸರಕಾರ ೧೯೪೯ ರಲ್ಲಿ ೪೦-೫೦ ಹಳ್ಳಿಗಳನ್ನು ಒಂದು ಫಿರ್ಕಾ ಎಂದು ಗುರುತಿಸಿ ಇಂಥ ಫಿರ್ಕಾ ಗಳ ಸಮಗ್ರ ಅಭಿವೃದ್ಧಿಗೆ ಯೋಜನೆ ಹಾಕಿತು. ಅದೇ ರೀತಿ ಯಲ್ಲಿ ಮಹಾರಾಷ್ಟ್ರ ಸರಕಾರವು ಸರ್ವೋದಯ ಯೋಜನೆ ಗಳನ್ನು ಪ್ರಾಯೋಗಿಕವಾಗಿ ಪ್ರಾರಂಭಿಸಿತು. ಪಾಕಿಸ್ತಾನದಿಂದ ವಲಸೆ ಬಂದ ನಿರಾಶ್ರಿತರಿಗಾಗಿ ನೀಲೋಖೇರಿ ಮತ್ತು ಫರೀದಾ ಬಾದುಗಳಲ್ಲಿ ಸಹಕಾರೀ ತತ್ವದ ಮೇಲೆ ಗ್ರಾಮಗಳನ್ನು ಅಭಿ ವೃದ್ಧಿಪಡಿಸಲಾಯಿತು. ಎಟಾವದ ೧೦೨ ಗ್ರಾಮಗಳಲ್ಲಿ ಕೂಡಾ ಇಂಥ ಯೋಜನೆಗಳನ್ನು ಪ್ರಾರಂಭಿಸಲಾಯಿತು. ಇವುಗಳ ಪ್ರಾರಂಭಿಕ ಯಶಸ್ಸನ್ನು ಕಂಡು ಭಾರತ ಸರಕಾರವು ರಾಷ್ಟ್ರ ವ್ಯಾಪಿಯಾದ ಸಮುದಾಯ ವಿಕಾಸ ಕಾರ್ಯಕ್ರಮಗಳನ್ನು ೧೯೫೨ ರಲ್ಲಿ ಪ್ರಾರಂಭಿಸಿತು.

ಸಮುದಾಯ ವಿಕಾಸ ಯೋಜನೆಯ ಪ್ರೇರಣೆ ದೇಶೀ ಯವೂ ಹೌದು, ವಿದೇಶೀಯವೂ ಹೌದು. ನಮ್ಮ ಸರಕಾರದ ಹಣ, ನಮ್ಮ ನಾಯಕರ ಬೆಂಬಲ, ಪರಿಣತರ ಜ್ಞಾನ ಇವುಗಳ ಜೊತೆ ಪಾಶ್ಚಿಮಾತ್ಯ ದೇಶಗಳ ಹಣ, ಪರಿಣತಿಗಳೂ ಯುಕ್ತ ರಾಷ್ಟ್ರ ಸಂಘದ ಬೆಂಬಲವೂ ಈ ಪ್ರಯತ್ನಕ್ಕೆ ದೊರೆಯಿತು. ಯುಕ್ತರಾಷ್ಟ್ರ ಸಂಘದಿಂದ ನೇಮಕ ಹೊಂದಿದ ಮೌಲ್ಯ

ಮಾಪನಾ ನಿಯೋಗವು ಸಮುದಾಯ ವಿಕಾಸ ಯೋಜನೆಯನ್ನು "೨೦ ನೇ ಶತಮಾನದ ಸ್ಮರಣೀಯ ಸಂಗತಿ" ಎಂದು ಸಾರಿತು. ಪಂಡಿತ ನೆಹರೂ "ಇಷ್ಟು ದೊಡ್ಡ ಹಾಗೂ ಇಷ್ಟು ಕ್ರಾಂತಿಕಾರಿಯಾದ ಸಂಗತಿ ಜಗತ್ತಿನ ಯಾವ ದೇಶದಲ್ಲಿಯೇ ಆಗಲಿ ಈಚೆಗಿನ ವರ್ಷಗಳಲ್ಲಿ ಜರುಗಿಲ್ಲ," ಎಂದಿದ್ದರು. ಕೆಲವರು ಇವನ್ನು "ಗ್ರಾಮಾಂತರ ಪ್ರದೇಶದ ಮೌನಕ್ರಾಂತಿ" ಎಂದು ವರ್ಣಿಸಿದರು. ಗ್ರಾಮಾಂತರ ಪ್ರದೇಶದ ಸರ್ವಾಂಗೀಣ ಉನ್ನತಿಯು ಇದರ ಗುರಿಯಾಗಿತ್ತು. ಸರಕಾರದ ಜುಲುಮೆಯಿಲ್ಲದೆ ಜನರೇ ತಮ್ಮ ಅಭಿವೃದ್ಧಿಯಲ್ಲಿ ತೊಡಗಿಕೊಳ್ಳುವ ಹಾಗೂ ಹೊಸ ತಂತ್ರಜ್ಞಾನದ ಸಹಾಯದಿಂದ ಗ್ರಾಮೀಣರ ಅವಶ್ಯಕತೆಗಳನ್ನು ಪೂರೈಸುವುದು ಸಮುದಾಯ ವಿಕಾಸ ಯೋಜನೆಯ ಮುಖ್ಯಾಂಶ. ಸಹಕಾರವು ವಿಕಾಸ ಯೋಜನೆಯ ಕೇಂದ್ರ ತತ್ವ. ಇಂಥ ವ್ಯಾಪಕವಾದ ಉದ್ದೇಶವನ್ನು ಹೊಂದಿದ, ಇಷ್ಟು ಆಶಾವಾದದಿಂದ ಪ್ರಾರಂಭವಾದ ಈ ಯೋಜನೆಯು ಪೂರ್ಣ ಪ್ರಮಾಣದ ಗ್ರಾಮೀಣ ಅಭಿವೃದ್ಧಿಯನ್ನು ಸಾಧಿಸುವುದರಲ್ಲಿ ವಿಫಲವಾದುದು ನಮ್ಮ ದುರದೃಷ್ಟ.

ನಮ್ಮ ವಿಕಾಸ ಯೋಜನೆಗಳಲ್ಲಿ ಜನರು ಸಕ್ರಿಯವಾಗಿ ಪಾಲುಗೊಳ್ಳುತ್ತಿಲ್ಲವೆಂದು ಗ್ರಹಿಸಿದ ಮೇಲೆ ಕೇಂದ್ರ ಸರಕಾರವು ಪಂಚಾಯತಿ ರಾಜ್ಯವನ್ನು ಪುನರುಜ್ಜೀವನಗೊಳಿಸುವ ಪ್ರಯತ್ನ ಮಾಡಿತು. ಪಂಚಾಯತಿ ರಾಜ್ಯವು ಗ್ರಾಮೀಣ ಅಭಿವೃದ್ಧಿಗೆ ನಿಜವಾದ ತಳಪಾಯ ಎಂದು ನಿರ್ಣಯಿಸಿ ಕೇಂದ್ರ ಹಾಗೂ

ಾಜ್ಯ ಸರಕಾರಗಳು ಪಂಚಾಯತಿ ಸಂಸ್ಥೆಗಳನ್ನು ಕಾಯ್ದೆ ಮೂಲಕ ಬಲಪಡಿಸಿದವು. ನಂತರ ಸಹಕಾರ ಸಂಘ, ಬ್ಲಾಕ್ ಭಿವೃದ್ಧಿ, ರೈತ ಸೇವಾ ಸಂಘ ಇತ್ಯಾದಿ ಸಂಸ್ಥೆಗಳನ್ನು ಬೆಳೆ ಕೊಳ್ಳಲಾಯಿತು. ಇವು ಗ್ರಾಮೀಣ ಬದಲಾವಣೆಗೆ ಮಹತ್ತರ ಾದ ಕೊಡುಗೆಯನ್ನು ಕೊಡಬಹುದಾಗಿತ್ತು. ಆದರೆ ಅವುಗಳು ೂಡಾ ಯಶಸ್ವಿಯಾಗಲಿಲ್ಲ.

ನಾವಿಲ್ಲಿ ಸಾಕ್ಷರತಾ ಪ್ರಸಾರದ ಬಗ್ಗೆ ಒಂದೆರಡು ಮಾತು ಗಳನ್ನು ಹೇಳಬೇಕು. ನಮ್ಮ ಗ್ರಾಮೀಣರ ಅಜ್ಞಾನವು ಪ್ರಗತಿಗೆ ಅಡ್ಡಿಯಾಗಿದೆ ಎಂಬುದನ್ನು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಈ ಅಜ್ಞಾನವನ್ನು ಹೊಡೆದೋಡಿಸಲು ಪೂರ್ಣಸಾಕ್ಷರತೆ ಬೇಕೆಂದು ಎಲ್ಲರಿಗೆ ಮನವರಿಕೆಯಾಗಿದೆ. ಈ ಕಾರಣಕ್ಕಾಗಿ ಸಾಕ್ಷರತಾ ಕಾರ್ಯಕ್ರಮಗಳು ಪ್ರಾರಂಭವಾದುವು. ಚಿಕ್ಕಮಕ್ಕಳನ್ನು ಹೆಚ್ಚು ಹೆಚ್ಚಾಗಿ ಶಾಲೆಗೆ ಕಳುಹಿಸುವ ಪ್ರಯತ್ನ ಮಾಡಲಾಯಿತು. ಅಲ್ಲದೆ ಗ್ರಾಮಾಂತರ ಪ್ರದೇಶದಲ್ಲಿ ವಯಸ್ಕರ ಶಿಕ್ಷಣವನ್ನು ಪ್ರಚುರಪಡಿಸಲಾಯಿತು. ರೇಡಿಯೋ, ಟೆಲಿವಿಜನ್ ಹಾಗೂ ಸೆಟಿಲಾಯಿಟು (ಭೂಉಪಗ್ರಹ) ಗಳ ಮೂಲಕ ಅನಕ್ಷರಸ್ಥರಿಗೆ ಹಾಗೂ ರೈತರಿಗೆ ಬೇಕಾದ ಶಿಕ್ಷಣ ಹಾಗೂ ಮಾಹಿತಿಯನ್ನು ಒದಗಿಸುವ ಯೋಜನೆಗಳನ್ನು ಸರಕಾರಗಳು ಹಾಕಿಕೊಂಡವು. ಅಂದರೆ ಶಿಕ್ಷಣ ಹಾಗೂ ಜ್ಞಾನ ಪ್ರಸಾರದಿಂದ ಗ್ರಾಮೀಣ ಪರಿವರ್ತನೆ ಸಾಧಿಸುವ ಗುರಿಯನ್ನು ಇಟ್ಟುಕೊಂಡವು. ಈ ಎಲ್ಲ ಪ್ರಯತ್ನಗಳು ಪೂರ್ಣ ಯಶಸ್ವಿಯಾಗಿವೆ ಅಥವಾ ವಿಫಲ

ವಾಗಿವೆ ಎಂಬ ನಿರ್ಧಾರಕ್ಕೆ ಬರುವುದು ಕಷ್ಟ. ಕೆಲವು ಪ್ರಯತ್ನ ಗಳು ಈಗಿಂದೀಗ ಫಲಕೊಡುವುದು ಸಾಧ್ಯವಿಲ್ಲ. ಯೋಜಿತ ಬದಲಾವಣೆಗಳಲ್ಲಿ ಹಲವು ಬದಲಾವಣೆಗಳು ಸಂಭವಿಸದೇ ಹೋಗಬಹುದು, ಆದರೂ ಈ ಪ್ರೇರಣೆಗಳೂ ಪ್ರಯತ್ನಗಳೂ ಭಾರತದ ಗ್ರಾಮಗಳ ಮೇಲೆ ಪ್ರಭಾವ ಬೀರಿವೆಯೆಂಬುದನ್ನು ಒಪ್ಪಲೇ ಬೇಕು.

೪. ಬದಲಾವಣೆಯ ಲಾಭ-ನಷ್ಟಗಳು, ಸಮಸ್ಯೆಗಳು

ನಮ್ಮ ಗ್ರಾಮಗಳು ಬದಲಾಗುತ್ತಿವೆಯೆಂಬುದನ್ನು ಸ್ಥೂಲವಾಗಿ ಗ್ರಹಿಸಿದೆವು. ಆದರೆ ಅವು ಪ್ರಗತಿಪರ ಬದಲಾವಣೆ ಗಳೇ ಅಲ್ಲವೆ ? ಈ ಬಗ್ಗೆ ಏಕಾಭಿಪ್ರಾಯವಿಲ್ಲ. ನಾವು ಪ್ರಗತಿ ಯನ್ನು ಬೇರೆ ಬೇರೆ ಮಾನದಂಡಗಳಿಂದ ಅಳೆಯಬಹುದು. ಪಾಶ್ಚಿಮಾತ್ಯ ವಿದ್ವಾಂಸರು ಪ್ರಗತಿಯೆಂದರೆ ಜನರ ಭೌತಿಕ ಅನುಕೂಲಗಳು ಹೆಚ್ಚುವುದು, ಅವರ ವೈಚಾರಿಕತೆ ಬೆಳೆಯು ವುದು, ಅವರ ಸಾಧನಗಳ ಹಾಗೂ ಸಂಸ್ಥೆಗಳ ಕ್ಷಮತೆ ಹೆಚ್ಚು ವುದು ಇತ್ಯಾದಿ ಅರ್ಥಹಚ್ಚುತ್ತಾರೆ. ಅದೇ ರೀತಿಯಲ್ಲಿ ಅಪರಿ ಗ್ರಹ, ಆಧ್ಯಾತ್ಮಿಕತೆ, ವಿರಾಮಪ್ರಿಯತೆ, ಸಹನೆ, ಜಾತಿ, ಧರ್ಮ, ಅವಿಭಕ್ತ ಕುಟುಂಬ ಇಂಥ ಹತ್ತಾರು ಲಕ್ಷಣಗಳು ನಮ್ಮ ಸಂಪ್ರದಾಯಕ್ಕಿವೆ ಎನ್ನುತ್ತಾರೆ. ಈ ಮಾನದಂಡದಿಂದ

ಆಳಿದುನೋಡಿವರೆ ನಮ್ಮ ಗ್ರಾಮಗಳು ಬ್ರಿಟಿಷ ಆಗಮನದಿಂದ ಈಚೆಗೆ 'ಆಧುನಿಕ' ಗೊಳ್ಳುತ್ತಿವೆ., ಅಥವಾ ಪ್ರಗತಿಪರವಾಗುತ್ತಿವೆ. ಮಿಲ್ಟನ್ ಸಿಂಗರ್, ಮೆಂಡಲ್‌ಬಾವ್, ಯೋಗೇಂದ್ರ ಸಿಂಗ್ ಮುಂತಾದವರು ಇಂಥ ಅಭಿಪ್ರಾಯ ತಾಳಿದ್ದಾರೆ. ಅವರ ಪ್ರಕಾರ ಆಧುನಿಕತೆಯ ರಾಮ ಬರುವ ತನಕ ಭಾರತೀಯ ಸಮಾಜವೆಂಬ ಅಹಲ್ಯೆ ಕಲ್ಲಾಗಿದ್ದಳು. ಈಗ ಎಲ್ಲವೂ ಸರಿ ಹೋಗುತ್ತಿದೆ. ಭಾರತೀಯ ಗ್ರಾಮಗಳು ಪ್ರಗತಿಪರವಾಗುತ್ತ ಬಂದಿವೆ.

ಈ ಬದಲಾವಣೆಗಳ ಲಾಭ-ನಷ್ಟಗಳೇನು ಎಂದು ಈಗ ಲೆಕ್ಕ ಹಾಕೋಣ. ಎಂದೇ ಇರಲಿ, ಎಲ್ಲೇ ಇರಲಿ, ಬದಲಾವಣೆಗಳು ಕೆಲವು ಲಾಭಗಳನ್ನು ತಂದರೆ ಕೆಲವು ನಷ್ಟಗಳನ್ನೂ ತರುತ್ತವೆ. ಅದೇ ರೀತಿಯಲ್ಲಿ ಅವು ಕೆಲವರಿಗೆ ಅನುಕೂಲಗಳನ್ನು ಕೊಟ್ಟರೆ ಮತ್ತೆ ಕೆಲವರಿಗೆ ಕಿರುಕುಳಕೊಡುತ್ತವೆ. ನಮ್ಮ ಗ್ರಾಮೀಣ ಬದಲಾವಣೆಗಳೂ ಅಷ್ಟೆ. ಅವು ಗ್ರಾಮಾಂತರ ಪ್ರದೇಶದಲ್ಲಿ ಕೆಲವು ಅಪೇಕ್ಷಿತ ಲಾಭಗಳನ್ನು ತಂದಿರುವುದನ್ನು ಗಮನಿಸಬಹುದು. ಅದರಂತೆಯೇ ಅವು ಹಲವು ಹಾನಿಗಳನ್ನೂ ಸಮಸ್ಯೆಗಳನ್ನೂ ತಂದೊಡ್ಡಿವೆ.

ಗ್ರಾಮೀಣ ಬದಲಾವಣೆಗಳು ತಂದ ಲಾಭಗಳೇನು? ನಾವು ಈಗಾಗಲೇ ಹೇಳಿದಂತೆ ಗ್ರಾಮೀಣ ಪರಿಸರ ಹೆಚ್ಚು ಸುಧಾರಿಸಿದೆ. ಹಿಂದೆ ಇದ್ದುದಕ್ಕಿಂತ ಈಗ ಅದು ಹೆಚ್ಚು

ಆರೋಗ್ಯಕರವಾಗಿದೆ. ಮಲೇರಿಯಾ ನಿವಾರಣೆ ಆಗಿದೆ. ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟಲಾಗುತ್ತಿದೆ. ಕುಡಿಯುವ ನೀರನ್ನು ಒದಗಿಸಲಾಗುತ್ತಿದೆ. ಸಾರಿಗೆ ಸಂಪರ್ಕಗಳು ಸುಧಾರಿಸಿವೆ. ಎರಡನೆಯದಾಗಿ, ಗ್ರಾಮೀಣ ಅನಕ್ಷರತೆಯನ್ನು ಹೊಡೆದೋಡಿಸಲಾಗುತ್ತಿದೆ. ಹಳ್ಳಿಗರಿಗೆ ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಿ ಕೊಡುವ ಮನಸ್ಸಾಗಿದೆಯಲ್ಲದೇ ಅನಕ್ಷರಸ್ಥರಾದ ವಯಸ್ಕರೂ ಓದುಬರಹ ಕಲಿಯಬೇಕೆಂದು ಮನವರಿಕೆಯಾಗಿದೆ. ಮೂರನೆಯದಾಗಿ, ಸಾಂಪ್ರದಾಯಿಕ ಜಾತಿತಾರತಮ್ಯಗಳಿಗೆ ಈಗ ಮಾನ್ಯತೆ ಉಳಿದಿಲ್ಲ. ಸಾಂಪ್ರದಾಯಿಕ ಗ್ರಾಮಗಳಲ್ಲಿಯೂ ಹಿಂದಿನಂತೆ ಕಟ್ಟುನಿಟ್ಟಾದ ಪ್ರತ್ಯೇಕತೆ ಈಗ ಸಾಧ್ಯವಿಲ್ಲ. ಹೀಗೆ ಬದಲಾವಣೆಗಳು ಜಾತಿಯನ್ನು ದುರ್ಬಲಗೊಳಿಸಿವೆ. ನಾಲ್ಕನೆಯದಾಗಿ ಹಲವಾರು ಭಾಗಗಳಲ್ಲಿ ಭೂಸುಧಾರಣಾ ಕ್ರಮಗಳಿಂದಾಗಿ ಜಮೀನುದಾರರಾದಿಯಾಗಿ ಮಧ್ಯವರ್ತಿಗಳಿಂದ ಆಗುತ್ತಿದ್ದ ಶೋಷಣೆ ಬಹಳ ಮಟ್ಟಿಗೆ ತಗ್ಗಿರುವುದನ್ನೂ ನಾವು ನೋಡಬಹುದು. ಐದನೆಯದಾಗಿ, ಪಂಚಾಯತಿ ಹಾಗೂ ಸಮುದಾಯ ವಿಕಾಸ ಯೋಜನೆಗಳಿಂದಾಗಿ ಹಿಂದುಳಿದ ವರ್ಗಗಳಿಗೆ ತಮ್ಮ ಸ್ಥಾನಮಾನ ಹಾಗೂ ಹಕ್ಕುಗಳ ಅರಿವು ಮೂಡಿದೆ. ಕೊನೆಯದಾಗಿ ಹಾಗೂ ಮುಖ್ಯವಾಗಿ, ವಿಜ್ಞಾನ ಮತ್ತು ಯಂತ್ರಜ್ಞಾನದ ನೆರವಿನಿಂದ ಕೃಷಿ ಸುಧಾರಣೆಯಾಗಿ ರೈತರ ಉತ್ಪನ್ನ ಹೆಚ್ಚಿದೆ. ಅವರ ಉತ್ಕರ್ಷಕ್ಕೆ ಬೇಕಾದ ನೆಲೆ ಸಿದ್ಧವಾಗಿದೆ.

ಈ ಲಾಭಗಳು ಸದ್ಯ ನಮ್ಮ ಗ್ರಾಮೀಣರು ಎದುರಿಸು ತ್ತಿರುವ ಸಮಸ್ಯೆಗಳನ್ನು ಮರೆಮಾಚಲಾರವು. ಇವುಗಳನ್ನು ಸರಿಯಾಗಿ ಅರ್ಥಮಾಡಿಕೊಂಡು ದಿಟ್ಟತನದಿಂದ ಎದುರಿಸು ವುದರಲ್ಲಿ ನಮ್ಮ ಕ್ಷೇಮವಿದೆ. ಭಾರತೀಯ ಗ್ರಾಮವು ಕವಲು ದಾರಿಯಲ್ಲಿದೆ. ಈಗ ಅದರ ಸಮಸ್ಯೆಗಳನ್ನು ಅರ್ಥಮಾಡಿ ಕೊಳ್ಳುವುದು ಅತಿ ಅವಶ್ಯಕವಾಗಿದೆ. ಆದುದರಿಂದ ಅರ್ಥ ಶಾಸ್ತ್ರಜ್ಞರು. ಸಮಾಜಶಾಸ್ತ್ರಜ್ಞರು ಹಾಗೂ ಇತರ ವೀಕ್ಷಕರು ಗುರುತಿಸಿದ ಕೆಲವು ಪ್ರಮುಖ ಸಮಸ್ಯೆಗಳನ್ನು ನಾವು ಇಲ್ಲಿ ಸಂಕ್ಷಿಪ್ತವಾಗಿ ವಿವರಿಸೋಣ.

ಮೊಟ್ಟಮೊದಲಿಗೆ ನಮ್ಮ ಕೃಷಿ ಪದ್ಧತಿಯಲ್ಲಿ ಉಂಟಾದ ಒಂದು ಬದಲಾವಣೆಯನ್ನು ನೋಡೋಣ. ನಮ್ಮ ಸಾಂಪ್ರ ದಾಯಿಕ ಕೃಷಿ ಪದ್ಧತಿಯಲ್ಲಿ ಕುಟುಂಬದ ಹಿಡುವಳಿಗಳು ಚಿಕ್ಕದಾಗಿದ್ದವು. ಇವುಗಳಿಗೆ ಮನುಷ್ಯರ ಮತ್ತು ದನಕರುಗಳ ಶ್ರಮ ಸಾಕಾಗುತ್ತಿತ್ತು: ಹಾಗೂ ಸೆಗಣಿ, ಉರುವಲು ಕಟ್ಟಿಗೆ ಯಂಥ ಪುನರಾವರ್ತಿಸುವ ಶಕ್ತಿಮೂಲಗಳು ಸಾಕಾಗುತ್ತಿದ್ದವು. ಜನಸಂಖ್ಯೆ ಹೆಚ್ಚಿದಂತೆ ನಾವೀಗ ಯಂತ್ರತಂತ್ರಗಳ ಸಹಾಯ ಪಡೆಯುತ್ತಿದ್ದೇವೆಯಲ್ಲದೆ ಎಣ್ಣೆ, ಅನಿಲ, ನಾಫ್ತಾ ಹಾಗೂ ಇತರ ಪೆಟ್ರೋಲಿಯಂ ಉತ್ಪನ್ನಗಳನ್ನು ಬಳಸಿ ಪರಿಸರವನ್ನು ಮಲಿನಗೊಳಿಸುತ್ತಿದ್ದೇವೆ. ಸದ್ಯ ಈ ಗಂಡಾಂತರ ಅಷ್ಟಾಗಿ ಬೆಳೆದಿಲ್ಲ. ಆದರೆ ಅದು ಗಂಡಾಂತರಕಾರಿಯಾಗಿ ಬೆಳೆಯುವ

ಮೊದಲೇ ನಾವು ಈ ಸಮಸ್ಯೆಯನ್ನು ಅರ್ಥಮಾಡಿಕೊಳ್ಳುವುದು ಒಳ್ಳೆಯದು.

ನಾವು ಗ್ರಾಮ ಸಮುದಾಯಗಳ ಅಭಿವೃದ್ಧಿಗೆಂದು ಸಮುದಾಯ ವಿಕಾಸ ಯೋಜನೆಗಳನ್ನು ಪ್ರಾರಂಭಿಸಿದೆವು. ಅವು ನಿಜವಾದ ಅರ್ಥದಲ್ಲಿ "ಸಮುದಾಯ" ದ ಬೆಳವಣಿಗೆಯನ್ನು ಸಾಧಿಸುವ ಬದಲು ಕೆಲವೇ ಕೆಲವು ಕುಟುಂಬಗಳ ಉತ್ಕರ್ಷಕ್ಕೆ ಕಾರಣವಾದವು. ಇದು ನಿಜವಾಗಿಯೂ ದುರದೃಷ್ಟಕರ. ಹಾಗೆಯೇ ಜನರ ಭಾಗೀದಾರಿಕೆ ಬೇಕು ಎಂದು ಪಂಚಾಯತಿ ಸಂಸ್ಥೆಗಳನ್ನು ಬಲಪಡಿಸುವ ನಿರ್ಧಾರ ಕೈಗೊಂಡೆವು. ಆದರೆ ಅವು ಮೇಲ್ಜಾತಿಗಳ ಹಾಗೂ ಅನುಕೂಲವಂತರ ವಿಶಿಷ್ಟ ಹಿತಾಸಕ್ತಿಗಳ ರಕ್ಷಣೆ ಮಾಡಿದವು; ಅಷ್ಟೇ ಅಲ್ಲ, ಅವು ಗ್ರಾಮದ ಐಕ್ಯತೆಗೆ, ಸಮಗ್ರತೆಗೆ ಭಂಗತಂದವು. ಸಾಂದ್ರ ಕೃಷಿ ಜಿಲ್ಲೆಯ ಯೋಜನೆಯಂಥ ಉಪಕ್ರಮಗಳನ್ನು ಪ್ರಾರಂಭಿಸಿದೆವು. ಅವು ಕೂಡ ಗ್ರಾಮೀಣ ಅಸಮಾನತೆಯನ್ನು ಹೆಚ್ಚಿಸಿವೆ ಎಂದು ತಜ್ಞರು ಅಭಿಪ್ರಾಯ ಪಡುತ್ತಾರೆ. ಇತ್ತೀಚೆಗಿನ ವರ್ಷಗಳಲ್ಲಿ ಇಂಥ ಅನೇಕ ಸಂಸ್ಥೆಗಳನ್ನು ರೂಪಿಸಲಾಗಿದ್ದರೂ ಅವು ಸಮಾಜ ಪರಿವರ್ತನೆಯನ್ನು ಸುಗಮಗೊಳಿಸಲೂ ಇಲ್ಲ, ಶೋಷಣೆಯನ್ನು ನಿರ್ಮೂಲಗೊಳಿಸಲೂ ಇಲ್ಲ. ಉದಾಹರಣಾರ್ಥವಾಗಿ ಸಹಕಾರಿ ಸಂಘಗಳನ್ನು, ಕೃಷಿ ಸೇವಾ ಸಂಸ್ಥೆಗಳನ್ನು ಅಥವಾ ಗ್ರಾಮೀಣ ಬ್ಯಾಂಕುಗಳನ್ನು ಹೆಸರಿಸಬಹುದು. ರೇಡಿಯೋ, ಟೆಲಿವಿಜನ್ ಹಾಗೂ ಭೂ ಉಪಗ್ರಹಗಳು ಜನರಿಗೆ

ಬೇಕಾದ ಮಾಹಿತಿ ಹಾಗೂ ಜ್ಞಾನವನ್ನು ಒದಗಿಸಿ ಗ್ರಾಮೀಣ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರ ವಹಿಸುತ್ತವೆ ಎಂದು ಲೆಕ್ಕಾಚಾರ ಹಾಕಲಾಗಿತ್ತು. ಇವು ಕೂಡಾ ಶ್ರೀಮಂತರ ಹಾಗೂ ದರಿದ್ರರ ನಡುವಿನ ಜ್ಞಾನದ ಅಂತರವನ್ನು ತೊಡೆದುಹಾಕಲು ಅಸಮರ್ಥವಾಗಿವೆ. ಸದ್ಯಕ್ಕೆ ಅವುಗಳಿಂದ ಮನರಂಜನೆ ದೊರೆಯುತ್ತಿದೆ ಅಷ್ಟೆ. ಬಲಾಢ್ಯ ರಾಷ್ಟ್ರಗಳಂತೆ ನಾವು ಕೂಡಾ ಭೂಉಪಗ್ರಹ ಹಾರಿಸಿಬಿಟ್ಟಿದ್ದೇವೆ ಎಂಬ ಸಮಾಧಾನ ಅಥವಾ ಪ್ರತಿಷ್ಠೆ ನಮಗೆ ಸಿಕ್ಕಿದೆ.

ನಮ್ಮ ಗ್ರಾಮಾಂತರ ಪ್ರದೇಶದಲ್ಲಿ ಈಗ ಸುಮಾರು ಮೂವತ್ತು ವರ್ಷಗಳಿಂದ ಆರ್ಥಿಕ ಅಭಿವೃದ್ಧಿ ಯೋಜನೆಗಳು ಜಾರಿಯಲ್ಲಿವೆ. ಇವು ಗ್ರಾಮೀಣ ಆರ್ಥಿಕ ಸ್ಥಿತಿಗತಿಗಳ ಮೇಲೆ ಹೇಗೆ ಪರಿಣಾಮ ಬೀರಿದವು ಎಂದು ನೋಡಿದಾಗ ನಮಗೆ ಬಹಳಷ್ಟು ನಿರಾಶೆ ಕಾದಿದೆ. ಸುವ್ಯವಸ್ಥಿತ ಅಧ್ಯಯನಗಳಿಂದ ಹಾಗೂ ಮರು ಅಧ್ಯಯನಗಳಿಂದ ಕಂಡುಬರುವ ಮಾತೆಂದರೆ ಹೆಚ್ಚಿನ ಗ್ರಾಮೀಣರು ಮತ್ತಿಷ್ಟು ಹೀನ ಸ್ಥಿತಿಗೆ ಇಳಿಯುತ್ತಿದ್ದಾರೆ. ಉದಾಹರಣೆಗೆ, ಹ್ಯಾಸವೆಲ್ ಎಂಬವನು ೧೯೬೭ ರಲ್ಲಿ ಮಾಡಿದ ಒಂದು ಮರು-ಅಧ್ಯಯನವುಂಟು. ಈಗ ಸುಮಾರು ಐವತ್ತು ವರ್ಷಗಳ ಹಿಂದೆ ಸ್ಲೇಟರನು ಚೆಂಗಲ್‌ಪೇಟೆಯ ಎರುವೆಳ್ಳಿಪೇಟ ಎಂಬ ಗ್ರಾಮದ ಅಧ್ಯಯನ ಮಾಡಿದ್ದ. ಅದೇ ಗ್ರಾಮವನ್ನು ಹ್ಯಾಸವೆಲ್ ಮತ್ತೊಮ್ಮೆ ಅಧ್ಯಯನ ಮಾಡಿದಾಗ ಅವನು ನೋಡಿದ್ದೇನೆಂದರೆ ಆ ಗ್ರಾಮದ ಹಳೆಯ

ಜಮೀನುದಾರರು ತಮ್ಮ ಸ್ಥಿತಿಯನ್ನು ಸಾಕಷ್ಟು ಸುಧಾರಿಸಿ ಕೊಂಡಿದ್ದರು. ಅಲ್ಲಿನ ಭೂಮಿ ಮುಂಚೆಗಿಂತ ಹೆಚ್ಚು ಇಳುವರಿ ಕೊಡುತ್ತಿತ್ತು. ಆದರೆ ಅಲ್ಲಿಯ ಗೇಣಿದಾರರು ಎಂದಿನಂತೆಯೇ ಸಾಲಸೋಲುಗಲ್ಲಿ ಮುಳುಗಿದ್ದರು. ಕೆಳಜಾತಿಯ ಕೃಷಿಕೂಲಿ ಕಾರರಿಗಂತೂ ಅಭಿವೃದ್ಧಿಯ ಫಲ ಕಿಂಚಿತ್ತೂ ಮುಟ್ಟಿರಲಿಲ್ಲ. ಭೂಶಾಸನಗಳು ಜಾರಿಗೆ ಬಂದಿದ್ದರೂ ಭೂಮಾಲಿಕರು ಏನನ್ನೂ ಕಳೆದುಕೊಳ್ಳಲಿಲ್ಲ, ಭೂರಹಿತರು ಏನನ್ನೂ ಗಳಿಸಿಕೊಳ್ಳಲಿಲ್ಲ. ತಂಜಾವೂರು ಜಿಲ್ಲೆಯ ಪಲಕ್ಕುರಿಚಿ ಗ್ರಾಮದಲ್ಲಿಯೂ ಹೀಗೆಯೇ ಆಯಿತೆಂದು ಹ್ಯಾಸವೆಲ್ ಹೇಳಿದ್ದಾನೆ. ತಮಿಳು ನಾಡಿನ ಕುಂಭಪೆಟ್ಟಾ ಗ್ರಾಮದ ಆದಿದ್ರಾವಿಡ ಪಣೆಯಾಳ್ ಕೆಲಸಗಾರರ ಸ್ಥಿತಿಗತಿಗಳನ್ನು ಅಧ್ಯಯನ ಮಾಡಿದ ಕ್ಯಾಥಲಿನ್ ಗೋ ಅವಳು ಕೂಡಾ ಇಂಥ ನಿರಾಶಾದಾಯಕ ವರದಿ ಕಳುಹಿಸಿದ್ದಾಳೆ. ನಮ್ಮ ಮಂಡ್ಯದ ಹತ್ತಿರದ ದಲೆನಾ ಮತ್ತು ವಂಗೆಲಾ ಎಂಬ ಎರಡು ಹಳ್ಳಿಗಳನ್ನು ಹದಿನೈದು ವರ್ಷಗಳ ಅಂತರದಲ್ಲಿ ಎರಡು ಬಾರಿ ಅಧ್ಯಯನ ಮಾಡಿದ ಸ್ಕಾರಲೆಟ್ ಎಪಸ್ಟೀನ್ ಎಂಬ ಮಹಿಳೆಯು ಅಲ್ಲಿನ ಆದಿದ್ರಾವಿಡ ಎಂಬ ಕೆಳ ಜಾತಿಯ ಜನರ ಹಾಗೂ ಬಡವರ ಸ್ಥಿತಿ ಸುಧಾರಿಸಲಿಲ್ಲ ಎಂದಿದ್ದಾಳೆ. ದೇಶದ ಬೇರೆ ಬೇರೆ ಭಾಗಗಳಿಂದ ಇಂಥವೇ ಅಭಿಪ್ರಾಯಗಳು ಬಂದಿವೆ. ಭಾರತದ ಬಡತನದ ಬಗ್ಗೆ ಅಧ್ಯಯನ ಮಾಡಿದ ವಿ. ಮ. ದಾಂಡೇಕರ್ ಮತ್ತು ನೀಲಕಂಠ ರಥ್ ಅವರೂ ಕೂಡಾ ನಮ್ಮ ಗ್ರಾಮೀಣ ಬಡತನವು ಹೆಚ್ಚು

ಹೆಚ್ಚು ಆಳವಾಗುತ್ತ ಹೋಗುತ್ತಿದೆಯೆಂಬ ನಿರ್ಣಯಕ್ಕೆ ಬಂದಿದ್ದಾರೆ. ಗ್ರಾಮೀಣ ಪ್ರದೇಶದ ಜನರಲ್ಲಿ ಪ್ರತಿಶತ ೫೦ ರಷ್ಟು ಜನರು ದಾರಿದ್ರ್ಯ ಸೀಮಾರೇಷೆಯ ಕೆಳಗಿದ್ದಾರೆ, ಅಂದರೆ ಹೇಗೋ ಬದುಕಿಕೊಂಡಿರುವ ಕಡುಬಡವರಾಗಿದ್ದಾರೆ. ಇವರ ಸಂಖ್ಯೆಯು ಈ ಅಭಿವೃದ್ಧಿಯ ದಶಕಗಳಲ್ಲಿ ಹೆಚ್ಚಿದೆಯೇ ವಿನಾ ಕಡಿಮೆಯಾಗಿಲ್ಲ. ಸದ್ಯ ನಮ್ಮ ಗ್ರಾಮಾಂತರ ಪ್ರದೇಶದಲ್ಲಿ ಸುಮಾರು ೨೫ ಕೋಟಿ ಕಡು ಬಡವರು ವಾಸವಾಗಿದ್ದಾರೆ.

ಈ ಸಂದರ್ಭದಲ್ಲಿ ಅನೇಕರು ಕೇಳುವ ಪ್ರಶ್ನೆಯೊಂದಿದೆ. ಕೇಂದ್ರ ಹಾಗೂ ರಾಜ್ಯ ಸರಕಾರಗಳು ಗ್ರಾಮೀಣ ಪ್ರದೇಶದ ಕೃಷಿ, ನೀರಾವರಿ, ವಿದ್ಯುತ್ ಯೋಜನೆಗಳಿಗಾಗಿ ಸಾವಿರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿವೆ. ಅದರಿಂದ ಯಾವ ಲಾಭವೂ ದಕ್ಕಿಲ್ಲವೆ? ನಿಜ, ಅದೆಷ್ಟೋ ಹಳ್ಳಿಗಳಿಗೆ ಹಿಂದೆ ನೀರಾವರಿ ಸೌಕರ್ಯಗಳು ಇರಲಿಲ್ಲ. ಅನೇಕ ನೀರಾವರಿ ಯೋಜನೆಗಳನ್ನು ಈಗ ಹಮ್ಮಿಕೊಳ್ಳಲಾಗಿದೆ. ಹಸಿರುಕ್ರಾಂತಿ ಆಗುತ್ತಿದೆಯೆಂಬ ಭಾವನೆ ಬರುತ್ತಿದೆ. ಆದರೆ ನೀರಾವರಿಯ ಅರ್ಥಶಾಸ್ತ್ರ ತಿಳಿದವರು ಹೇಳುವ ಕಥೆಯೇ ಬೇರೆ. ಉದಾಹರಣೆಗೆ, ಅರ್ಥ ಶಾಸ್ತ್ರಜ್ಞರಾದ ಡಾ. ಡಿ.ಎಂ. ನಂಜುಂಡಪ್ಪ ಅವರು ಕರ್ನಾಟಕದ ಹೆಮ್ಮೆಯ ಘಟಪ್ರಭಾ, ಮಲಪ್ರಭಾ ನೀರಾವರಿಯ ಕಮಾಂಡ್ ಏರಿಯಾದಲ್ಲಿರುವ ರೈತರಲ್ಲಿ ೫೦% ರಷ್ಟು ರೈತರು ದೊಡ್ಡ ಹಿಡುವಳಿದಾರರಾದ ಶ್ರೀಮಂತ ರೈತರು ಎಂದು ತಿಳಿಸಿದ್ದಾರೆ. ಹಸಿರುಕ್ರಾಂತಿಯ ಲಾಭಗಳು ತಟ್ಟುವುದು ಇಂಥ ರೈತ

ರಿಗೆ ಮಾತ್ರ. ಭೂಮಿಯನ್ನು ಹಂಚಿದ್ದರಿಂದಲೂ ನಾವು ಬಹ ಳಷ್ಟು ಸಾಧಿಸಿಲ್ಲ ಎಂದು ಡಾ. ನಂಜುಂಡಪ್ಪ ಅಭಿಪ್ರಾಯಪಟ್ಟಿದ್ದಾರೆ. ಸದ್ಯಕ್ಕಂತೂ ಕೃಷಿಕೂಲಿಕಾರರಿಗೆ ಏನೇನೂ ದಕ್ಕಿಲ್ಲ. ದುರದೃಷ್ಟದ ಮಾತೆಂದರೆ ಗ್ರಾಮವಾಸಿಗಳಾದ ನಮ್ಮ ರೈತರಿಗೆ ಬೇಕಾಗುವ ಮೇವನ್ನು ನಾವು ಗ್ರಾಮಗಳಲ್ಲಿ ತಯಾರಿಸುವುದಿಲ್ಲ. ಅದನ್ನು ನಾವು ಪಟ್ಟಣದಲ್ಲಿ ತಯಾರಿಸುತ್ತಿದ್ದೇವೆ. ಎಣ್ಣೆ ಹಿಂಡುವುದು, ಅರಳೆ ಹಿಂಜುವುದು, ಕೃಷಿಗೆ ಬೇಕಾದ ಸಲಕರಣೆಗಳನ್ನು ತಯಾರಿಸುವುದು, ಸಕ್ಕರೆ ತಯಾರಿಸುವುದು ಇವೆಲ್ಲ ನ್ಯಾಯವಾಗಿ ಗ್ರಾಮದಲ್ಲೇ ಆಗಬೇಕು. ಆದರೆ ಇಂಥ ಚಿಕ್ಕ ಪುಟ್ಟ ಕೈಗಾರಿಕೆಗಳನ್ನು ನಾವು ಪಟ್ಟಣಗಳಲ್ಲೇ ನೋಡುತ್ತೇವೆ. ಹಳ್ಳಿಯ ರೈತರು ವಿರಾಮಕಾಲದಲ್ಲಿ ದುಡಿದು ಹೆಚ್ಚು ಗಳಿಸಲು ಅನುಕೂಲವಾಗುವಂತೆ ನಾವು ಏನನ್ನೂ ಮಾಡಿಲ್ಲ ಎಂದು ಅರ್ಥಶಾಸ್ತ್ರಜ್ಞರು ಪದೇ ಪದೇ ದೂರಿಕೊಂಡಿದ್ದಾರೆ. ನಮ್ಮ ಬ್ಯಾಂಕುಗಳ ಬಳಿ ಟೆಲಿವಿಜನ್ ಸೆಟ್, ಏರ್‌ಕಂಡಿಶನರ್, ಅಲಂಕಾರದ, ಹಂಚು. ಡೆಕೊಲಾಮ್ ಹಾಳೆ ವಾಶಿಂಗ್ ಮಶೀನ್, ಐಸ್ ಕ್ರೀಮ್ ಕಾರ್ಖಾನೆಗಳನ್ನು ತೆರೆಯಲು ಹಣವಿದೆ. ಆದರೆ ನಮ್ಮ ಅರಣ್ಯ ಬೆಳಸುವುದಕ್ಕೆ ಅಥವಾ ಗ್ರಾಮದ ನೀರುಸರಬರಾಜಿಗೆ ಸರಕಾರದ ಬಳಿ ಹಣವಿಲ್ಲ. ಈ ಮಾತುಗಳ ಅರ್ಥವಿಷ್ಟೆ; ಗ್ರಾಮೀಣ ವಿಕಾಸದ ಬಗ್ಗೆ ನಮ್ಮ ಕಳಕಳಿ ಬಹುಮಟ್ಟಿಗೆ ಅಪ್ರಮಾಣಿಕವಾದದ್ದು. ಬಾಹ್ಯಾಡಂಬರದ್ದು. ಇನ್ನೂ ಒಂದೆರಡು ಮಾತುಗಳನ್ನು ಇಲ್ಲಿ ಸೇರಿಸಬಹುದೆನ್ನಿಸುತ್ತದೆ. ನಮ್ಮ

ಆಡಳಿತಶಾಹಿಗೆ ಗ್ರಾಮೋದ್ಧಾರ ಎಂಬುದು ಬೇಸರ ತರಿಸುವ ಕೆಲಸವಾಗಿ ಕಾಣತ್ತಿರಬಹುದು. ಬ್ರಿಟಿಷ ಆಡಳಿತಶಾಹಿಯು ಪಡಿಯಚ್ಚಿನಲ್ಲಿ ಸೃಷ್ಟಿಯಾದ ನಮ್ಮ ವ್ಯವಸ್ಥೆಗೆ ಗ್ರಾಮೀಣ ಪ್ರಗತಿಯ ಬಗ್ಗೆ ಚೀನಾ, ಇಸ್ರಾಯಿಲ್ ದೇಶಗಳ ಕಾರ್ಯ ಕರ್ತರಿಗಿರುವಂಥ ನಿಜವಾದ ಕಾಳಜಿ ಇಲ್ಲ. ಇವರಿಂದ ಗ್ರಾಮೀಣ ಪರಿವರ್ತನೆ ಮತ್ತು ಪ್ರಗತಿಯನ್ನು ಸಾಧಿಸುವುದು ಪ್ರಯಾಸದ ಕೆಲಸ ಎಂದರೆ ತಪ್ಪಿಲ್ಲ.

ಬಹಳ ಕಾಲದಿಂದಲೂ ನಮ್ಮ ಹಳ್ಳಿಗರ ಸಾಲದ ಹೊರೆಯ ಬಗ್ಗೆ ಕೇಳುತ್ತಿದ್ದೇವೆ. ಪಂಜಾಬದ ರೈತರು-ಭಾರತದ ರೈತರೇ ಅನ್ನಿ-ಸಾಲದಲ್ಲಿ ಹುಟ್ಟಿ, ಸಾಲದಲ್ಲಿ ಬೆಳೆದು, ಸಾಲದಲ್ಲಿ ಸಾಯುವ ಬಗ್ಗೆ ಮ್ಯಾಲ್ಕಂ ಡಾರ್ಲಿಂಗ್ ೧೯೨೫ರ ಹೊತ್ತಿಗೆ ಹೇಳಿದ್ದ. ಆ ಸಾಲದ ಹೊರೆ ಇಳಿದಂತೆ ಕಾಣುವುದಿಲ್ಲ. ಡಾರ್ಲಿಂಗ್ ವರದಿಯ ನಂತರ ಸರಕಾರಿ ಹಾಗೂ ಸರಕಾರೇತರ ಸಮೀಕ್ಷೆಗಳು ಗ್ರಾಮೀಣ ಋಣಗ್ರಸ್ಥತೆಯ ಬಗ್ಗೆ ದಿಗಿಲುಗೊಳಿಸುವಷ್ಟು ಮಾಹಿತಿ ಒದಗಿಸಿವೆ. ಬದಲಾವಣೆಯಾಗುತ್ತಿರುವ ಇತ್ತೀಚೆಗಿನ ದಿನಗಳಲ್ಲಿ ಇಂಥ ಪರಿಸ್ಥಿತಿಗಳು ಪೂರ್ಣವಾಗಿ ಮಾಯವಾಗಿಲ್ಲ. ಸಾಲಕೊಡುವ ಸಹಕಾರಿ ಸಂಘಗಳು, ಗ್ರಾಮೀಣ ಬ್ಯಾಂಕುಗಳು, ತಕಾವಿ ಸಾಲ ಸೌಲಭ್ಯ, ಸಾಲ ಹಾಗೂ ಲೇವಾದೇವಿಯ ಬಗ್ಗೆ ಇರುವ ವಿವಿಧ ಕಾಯ್ದೆ ಕಾನೂನುಗಳು ಇವೆಲ್ಲ ಬಂದ ಮೇಲೂ ಗ್ರಾಮೀಣರ ಸಾಲದ ಜೋಳಿಗೆ ಹಗುರವಾಗಿಲ್ಲ ಎನ್ನುತ್ತಾರ.

ಗ್ರಾಮೀಣ ನಿರುದ್ಯೋಗ ಸಮಸ್ಯೆಯ ಬಗೆಗೂ ಇಲ್ಲಿ ಒಂದೆರಡು ಮಾತುಗಳನ್ನು ಹೇಳುವುದು ಉಚಿತವಾದೀತು. ಏರುತ್ತಿರುವ ಜನಸಂಖ್ಯೆ, ಭೂಮಿಯ ತುಟಾಗ್ರತೆ, ಗ್ರಾಮೀಣ ದಾರಿದ್ರ್ಯ, ಬಿಡುವಿನ ದಿನಗಳಲ್ಲಿ ದುಡಿಯಲು ಅನುಕೂಲ ವಾಗುವಂಥ ಗುಡಿಕೈಗಾರಿಕೆಗಳು ಇಲ್ಲದೇ ಇರುವುದು ಮುಂತಾದ ಕಾರಣಗಳಿಂದಾಗಿ ಗ್ರಾಮೀಣ ನಿರುದ್ಯೋಗ ಪರಿಸ್ಥಿತಿ ಮುಂದು ವರಿದಿದೆ. ಐದನೆಯ ಪಂಚವಾರ್ಷಿಕ ಯೋಜನೆಯಲ್ಲಿ ಏಳು ಕೋಟಿ ಜನರನ್ನು ಗ್ರಾಮೀಣ ಅಭಿವೃದ್ಧಿಯಲ್ಲಿ ತೊಡಗಿಸುವ ಉದ್ದೇಶ ಇಟ್ಟುಕೊಳ್ಳಲಾಗಿತ್ತು. ಆ ಗುರಿ ಅಸಾಧ್ಯ ಕೋಟಿ ಗಳಿಗೆ ಸೇರಿದೆ. ಕೃಷಿಯೇತರ ಕೆಲಸವಲ್ಲಿ ತೊಡಗಿದ ಜನರ ಸರಾ ಸರಿ ಉತ್ಪನ್ನಕ್ಕಿಂತ ಕೃಷಿ ಕೆಲಸಗಳಲ್ಲಿ ತೊಡಗಿದವರ ಸರಾಸರಿ ಉತ್ಪನ್ನ ಬಹಳ ಕೆಳಮಟ್ಟದಲ್ಲಿದೆ. ಇದಕ್ಕೊಂದು ಮುಖ್ಯ ಕಾರಣ ವೆಂದರೆ ವಾರಗಳ ಕಾಲ ಅಥವಾ ತಿಂಗಳುಗಳ ಕಾಲ ಅವರಿಗೆ ಉದ್ಯೋಗ ಇಲ್ಲದೇ ಇರುವುದು. ಉತ್ತರಪ್ರದೇಶ ಸರಕಾರದ ಒಂದು ಸಮೀಕ್ಷೆಯ ಪ್ರಕಾರ ಆ ರಾಜ್ಯದ ಪೂರ್ವಭಾಗದ ರೈತರು ವರ್ಷದಲ್ಲಿ ೩-೪ ತಿಂಗಳು ಕಾಲ ಮಾತ್ರ ದುಡಿಯು ತ್ತಾರೆ. ಪಶ್ಚಿಮಭಾಗದ ರೈತರು ವರ್ಷದಲ್ಲಿ ೨೫೮ ದಿನಗಳಿಂದ ೨೮೦ ದಿನಗಳ ತನಕ ದುಡಿಯುತ್ತಾರೆ. ಉಳಿದ ದಿನಗಳಲ್ಲಿ ಅವ ರಿಗೆ ಉದ್ಯೋಗವಿಲ್ಲ, ಉತ್ಪನ್ನವಿಲ್ಲ. ರೈತರಿಗಿಂತ ಹೆಚ್ಚಾಗಿ ತೊಂದರೆಗೆ ಒಳಗಾದವರು ಕೃಷಿ ಕೂಲಿಕಾರರು. ಇವರ ಸಮಸ್ಯೆ ಗಳು ನಾನಾ ಮುಖವಾಗಿವೆ. ಇವರಿಗೆ ಬೇಸಾಯ ಮಾಡಲು

ಭೂಮಿ ಇಲ್ಲ. ಗ್ರಾಮದಲ್ಲಿ ಸಿಕ್ಕ ಕೂಲಿಕೆಲಸದಿಂದ ಇವರ ಜೀವನ ನಡೆಯಬೇಕು. ಈ ಕೃಷಿ ಕೂಲಿಕಾರರಲ್ಲಿ ಹೆಚ್ಚಿನವರು ನಿರಕ್ಷರಕುಕ್ಷಿಗಳಾದ ಆದಿವಾಸಿಗಳು ಅಥವಾ ಅಸ್ಪೃಶ್ಯರು ಅಥವಾ ಸಾಮಾಜಿಕವಾಗಿ ಅತಿ ಹಿಂದುಳಿದ ಜನರೇ ಆಗಿರುತ್ತಾರೆ. ಇವರಲ್ಲಿ ಸಂಘಟನೆಯಿಲ್ಲ. ನಾಯಕತ್ವದ ಆಶ್ರಯ ಅಥವಾ ಬೆಂಬಲವಿಲ್ಲ; ಇವರು ಬಿಟ್ಟಿ-ಬೇಗಾರಿ ಮಾಡುತ್ತ ಮೇಲ್ಜಾತಿಯ ರೈತರನ್ನು ಆಶ್ರಯಿಸಬೇಕಾಗುತ್ತದೆ. ಇತ್ತೀಚೆಗೆ ಇವರಿಗೆ 'ಕೆಲಸಕ್ಕಾಗಿ ಆಹಾರ', 'ಗ್ರಾಮೀಣ ಉದ್ಯೋಗ ಕಾರ್ಯಕ್ರಮ' ಮುಂತಾದ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗುತ್ತಿದೆ. ಏನಿದ್ದರೂ ಇವರ ಸಮಸ್ಯೆ ಇನ್ನೂ ಬಗೆಹರಿದಿಲ್ಲ.

ಗ್ರಾಮೀಣ ಕುಟುಂಬವು ಬಲುನಿಧಾನವಾಗಿಯಾದರೂ ಬದಲಾಗುತ್ತಿದೆಯೆಂದು ಹೇಳಲಾಗುತ್ತಿದೆ. ಅವಿಭಕ್ತಕುಟುಂಬ ಪದ್ಧತಿಯು ಶಿಥಿಲವಾಗುತ್ತಿದೆಯೆಂಬುದನ್ನು ಆಗಲೇ ಪ್ರಸ್ತಾಪ ಮಾಡಿದ್ದೇವೆ. ಇದರಿಂದ ಉಂಟಾಗಬಹುದಾದ ಹಲವು ಪರಿಣಾಮಗಳನ್ನು ನಾವು ಸುಲಭವಾಗಿ ಊಹಿಸಿಕೊಳ್ಳಬಹುದು. ಕುಟುಂಬಗಳ ಭೂಮಿ ಹೆಚ್ಚುಹೆಚ್ಚಾಗಿ ಹೋಳಾಗುತ್ತದೆ. ಅವುಗಳ ಶಕ್ತಿಸಂಪತ್ತು ಕುಗ್ಗುತ್ತದೆ. ಕುಟುಂಬಗಳ ಉತ್ಪಾದನೆ ಕಡಿಮೆ ಇರುವುದರಿಂದ ಅವು ಗಳಿಸಿದ್ದನ್ನೆಲ್ಲ ಖರ್ಚುಮಾಡುತ್ತವೆ. ಉಳಿಸುವುದು ಕಡಿಮೆ. ಕಡಿಮೆ ಉಳಿಸುವುದರಿಂದ ಹೆಚ್ಚು ಹಣತೊಡಗಿಸುವುದು ಆಗುವುದಿಲ್ಲ. ಇದರಿಂದ ಮತ್ತೆ ಉತ್ಪಾ

ದನೆ ಕುಗ್ಗುತ್ತದೆ. ಇದರಿಂದ ಆ ಕುಟುಂಬಗಳಿಗೆ ಬೇಕಾದ ದನಕರುಗಳು, ಭೂಮಿ, ಉಪಕರಣಗಳು ಸಿಗದೇ ಅವು ಮತ್ತಷ್ಟು ಬಡತನವನ್ನು ಅನುಭವಿಸುತ್ತವೆ. ಎಲ್ಲ ಕಡೆಗೂ ಎಲ್ಲ ಕುಟುಂಬಗಳಿಗೂ ಹೀಗಾಗುವುದಿಲ್ಲ. ಸಾಕಷ್ಟು ಭೂಮಿ ಕಾಣಿಯಿರುವ ಕುಟುಂಬಗಳು ಹೇಗಾದರೂ ಪಾರಾಗಿ ಹೋಗುತ್ತವೆ. ಆದರೆ ಸ್ವಲ್ಪೇ ಭೂಮಿಯಿರುವ ಕುಟುಂಬಗಳಿಗೆ ಈ ಅನಾಹುತ ತಪ್ಪಿಲ್ಲ.

ನಿಮ್ಮ ಲಕ್ಷ್ಯವನ್ನು ಇನ್ನೊಂದು ವಿಷಯದ ಕಡೆ ಸೆಳೆಯಬೇಕು. ಗ್ರಾಮೀಣ ಬದಲಾವಣೆಗಳು ನಮ್ಮ ಗ್ರಾಮೀಣರ ಆಹಾರ ಪಾನೀಯಗಳ ಸತ್ವವನ್ನು ಕುಗ್ಗಿಸಿ ಅವರನ್ನು ನಿಧಾನವಾಗಿ ಸಾಯಿಸುತ್ತಿವೆ ಎಂದು ಈಗ ಪಿಸುಮಾತುಗಳಲ್ಲಿ ಹೇಳಲಾಗುತ್ತಿದೆ. ನಮ್ಮ ಹಳ್ಳಿಗರಿಗೆ ಈಗ ಗಟ್ಟಿಮುಟ್ಟಾದ ಮೈ ಹಾಗೂ ಕಠಿಣವಾದ ಕೆಲಸಕ್ಕೆ ಬೇಕಾದ ಶಕ್ತಿ ಇಲ್ಲವೆಂಬ ದೂರಿದೆ. ಈ ಮಾತು ನಿಜವೆ? ರಾಷ್ಟ್ರದ ಮಟ್ಟದಲ್ಲಿ ಈ ಮಾತನ್ನು ಪುಷ್ಟೀಕರಿಸುವುದಾಗಲೀ ಅಥವಾ ಅಲ್ಲಗಳೆಯುವುದಾಗಲೀ ಸಾಧ್ಯವಾಗಿಲ್ಲ. ದೇಶದ ತುಂಬ ಇರುವ ರೈತರು ಏನು ಉಣ್ಣುತ್ತಿದ್ದಾರೆ? ಅದರ ಆಹಾರ ಸತ್ವ ಹೇಗಿದೆ? ಅವರಿಗೆ ಯಾವ ಕೊರತೆಯಿದೆ ಎಂಬ ಬಗ್ಗೆ ಪೂರ್ಣ ಪ್ರಮಾಣದ ಸಮೀಕ್ಷೆ ಇನ್ನೂ ಆಗಬೇಕಷ್ಟೆ. ಮೆಕ್ಸಿಕೋ, ಜಪಾನಗಳಲ್ಲಿ ನಡೆಸಿದ ಅಧ್ಯಯನಗಳಲ್ಲಿ ಅಲ್ಲಿ ನಗರೀಕರಣದಿಂದ ಇಂಥ ಪರಿಣಾಮಗಳು ಕಂಡುಬಂದಿವೆ.

ಎಂದು ವರದಿಯಾಗಿದೆ. ನಮ್ಮಲ್ಲೂ ನಗರದ ಆಹಾರ ಪಾನೀಯ ಗಳು ರೂಢಿಗೆ ಬಂದು ಆಹಾರದ ಸಮತೋಲ ಕೆಟ್ಟುಹೋಗಿ ದೆಯೆಂದು ಅಭಿಪ್ರಾಯವಿದೆ. ಹಳ್ಳಿಗಳಲ್ಲಿ ಸಣ್ಣ ರೈತರು ಹಾಗೂ ಕೂಲಿಕಾರರು ಒಣರೊಟ್ಟಿ ಹಾಗೂ ಮೆಣಸಿನಕಾಯಿ ಯನ್ನಷ್ಟೆ ತಿನ್ನುವುದನ್ನು ನೋಡಿದರೆ ಅವರು ಏಕೆ ಶಕ್ತಿಹೀನ ರಾಗುತ್ತಿದ್ದಾರೆಂಬ ಅರಿವಾಗುತ್ತದೆ. ಗ್ರಾಮೀಣ ಬಡತನ ಹಿಂದಿಗಿಂತಲೂ ಹೆಚ್ಚುತ್ತಿರುವುದರಿಂದ ಅವರು ಹಿಂದಿನ ಪ್ರಮಾಣದಷ್ಟಾದರೂ ಪುಷ್ಟಿಕರ ಆಹಾರವನ್ನು ಸೇವಿಸುವುದು ಕಷ್ಟವಾಗಿದೆಯಂತೆ. ಇದು ನಿಜವಾದರೆ ಗ್ರಾಮೀಣ ಜನಾಂಗದ ಭವಿಷ್ಯ ಕಳವಳಕರವಾಗಿದೆ.

ಗ್ರಾಮೀಣ ಶಿಕ್ಷಣವೂ ಸಮಸ್ಯೆಯಿಂದ ಮುಕ್ತವಾಗಿಲ್ಲ. ಬಾಲಬಾಲಕಿಯರು ಹೆಚ್ಚಿನ ಸಂಖ್ಯೆಯಲ್ಲಿ ಶಾಲೆಗೆ ಸೇರುತ್ತಿರು ವುದು ಸಂತೋಷದ ಸಂಗತಿ. ಗ್ರಾಮೀಣ ವಯಸ್ಕರ ಶಿಕ್ಷಣಕ್ಕೂ ಬುನಾದಿ ಹಾಕಲಾಗಿದೆ. ಆದರೂ ಗ್ರಾಮೀಣ ಸಾಕ್ಷರತೆ ನಗರದ ಸಾಕ್ಷರತೆಗಿಂತ ಬಹಳ ಹಿಂದೆ ಬಿದ್ದಿದೆ, ಅದರಲ್ಲೂ ಸ್ತ್ರೀ ಶಿಕ್ಷಣ ಹೆಚ್ಚಿನ ಪ್ರಗತಿ ಸಾಧಿಸಿಲ್ಲ. ಇನ್ನೂ ಒಂದು ವಿಷಾದಕರ ಸಂಗತಿ ಯೆಂದರೆ ನಗರದಲ್ಲಿ ಉಚ್ಚ ಶಿಕ್ಷಣ ಪಡೆಯುತ್ತಿರುವ ಗ್ರಾಮೀಣ ಯುವಕರು ತಮ್ಮ ಗ್ರಾಮಗಳಿಗೆ ಮರಳಲು ಹಿಂದೇಟು ಹಾಕು ತ್ತಿದ್ದಾರೆ. ಅವರಿಗೆ ನಗರದ ಮೋಹ ಆವರಿಸಿಕೊಂಡು ಬಿಡು ತ್ತದೆ. ಕೃಷಿ, ವೈದ್ಯಕೀಯ ಹಾಗೂ ಇಂಜನೀಯರಿಂಗ್ ಪದವೀ

ಧರರು ತಾವು ಕಲಿತ ವಿದ್ಯೆಯನ್ನು ಗ್ರಾಮಗಳ ಅಭಿವೃದ್ಧಿಗಾಗಿ ಉಪಯೋಗಿಸಲು ಉತ್ಸುಕರಾಗಿಲ್ಲ. ಗ್ರಾಮೀಣ ಪ್ರದೇಶಗಳಿಂದ ಬರುವ ಇವರು ತಮ್ಮ ವಿದ್ಯೆಯಿಂದಾಗಿ ಗ್ರಾಮ ಜೀವನಕ್ಕೆ ವಿಮುಖರಾಗುತ್ತಿದ್ದಾರೆ.

ಭಾರತದ ಗ್ರಾಮೀಣ ಅಭಿವೃದ್ಧಿ ಹಾಗೂ ಪರಿವರ್ತನೆಗೆ ಆತಂಕಕಾರಿಯಾಗಿರುವ ಇನ್ನೊಂದು ಅಂಶವಿದೆ. ಅದೇನೆಂದರೆ ನಮ್ಮ ಅಧಿಕಾರಶಾಹಿ ವರ್ಗ ಹಾಗೂ ಆಡಳಿತ ಪದ್ಧತಿ. ಬ್ರಿಟಿಷ ಆಡಳಿತ ಪದ್ಧತಿಯಲ್ಲಿ ಬೆಳೆದು ಬಂದ ಅಧಿಕಾರಿ ವರ್ಗವು ಗ್ರಾಮೀಣ ಅಭಿವೃದ್ಧಿಯ ಕಾರ್ಯಭಾರಿಗಳಾಗುವುದು ಕಷ್ಟ ವೆಂದು ಯೋಜಕರಿಗೆ ತಿಳಿದಿತ್ತು. ಆದುದರಿಂದ ಅವರು ಹೊಸ ಅಧಿಕಾರಿವರ್ಗಗಳನ್ನು ಸೃಷ್ಟಿಸಬೇಕಾಯಿತು. ಇವರು ಜನರ ಆಶೋತ್ತರಗಳನ್ನು ಅರ್ಥಮಾಡಿಕೊಳ್ಳಬಲ್ಲರೆಂದೂ ಹೊಸ ಜ್ಞಾನ ಹಾಗೂ ವಿಧಾನಗಳನ್ನು ಹಳ್ಳಿಗರಿಗೆ ಮುಟ್ಟಿಸಬಲ್ಲ ರೆಂದೂ ಆಶಿಸಲಾಯಿತು. ಕ್ಷೇತ್ರ ಅಭಿವೃದ್ಧಿ ಅಧಿಕಾರಿ, ಅಭಿ ವೃದ್ಧಿ ಸಹಾಯಕ, ವಿಸ್ತರಣಾಧಿಕಾರಿ, ಗ್ರಾಮಸೇವಕ, ಮುಖ್ಯ ಸೇವಿಕಾ, ಸ್ವಾಸ್ಥ್ಯ ಕಾರ್ಯಕರ್ತ, ಮಲೇರಿಯಾ ಕಾರ್ಯಕರ್ತ ಮುಂತಾದ ಹೊಸ ಬಗೆಯ ಅಧಿಕಾರಿಗಳನ್ನು ನೇಮಿಸಲಾ ಗಿದೆ. ಅಭಿವೃದ್ಧಿಯ ಕಾರ್ಯಕ್ರಮಗಳನ್ನು ಇವರಿಗೆ ಒಪ್ಪಿಸ ಲಾಗಿದೆ. ಬ್ಯಾಂಕುಗಳಲ್ಲಿ ಕೃಷಿ ಸಾಲಗಳ ಉಸ್ತುವಾರಿ ಮಾಡಲು ವಿಶೇಷ ಅಧಿಕಾರಿಗಳನ್ನು ನೇಮಿಸಲಾಗಿದೆ. ಆದರೂ ಇವರೂ ಕೂಡ ಸರಕಾರದ ಇತರ ಖಾತೆಗಳ ಜನ

ರಂತೆಯೇ ವರ್ತಿಸುವುದನ್ನು ನೋಡಿದರೆ ನಿಜವಾಗಿಯೂ ವಿಷಾದವೆನಿಸುತ್ತದೆ. ಇತರ ಖಾತೆಗಳಲ್ಲಿರುವ ವಿಳಂಬಗಳು, ಹೊಣೆ ಹಾರಿಸಿಕೊಳ್ಳುವಿಕೆ, ಆಡಳಿತ ಯಂತ್ರದ ಅಡೆತಡೆಗಳು ಇಲ್ಲಿಯೂ ಮನೆ ಮಾಡಿವೆ. ಇಷ್ಟೂ ಸಾಲದೆಂಬಂತೆ ಗ್ರಾಮೀಣ ಜನರ ಯೋಜನೆಗಳು ಗ್ರಾಮೀಣ ಜನರ ಸ್ಥಳೀಯ ಅವಶ್ಯಕತೆ ಗಳನ್ನು ಗಣನೆಗೆ ತೆಗೆದುಕೊಳ್ಳಲು ಅಸಮರ್ಥವಾಗಿವೆ. ರಾಷ್ಟ್ರೀಯ ಯೋಜನಾ ಆಯೋಗವು ಈಗ ರಾಜ್ಯಗಳ ಸಲಹೆ ಗಳಿಗೆ ಹೆಚ್ಚಿನ ಗಮನಕೊಡುತ್ತಿದೆ ಹಾಗೂ ರಾಜ್ಯಸರಕಾರಗಳು ಜಿಲ್ಲಾ ಯೋಜನೆಗಳನ್ನು ರೂಪಿಸುತ್ತಿವೆ ಎಂಬುದನ್ನು ಒಪ್ಪಿ ಕೊಂಡರೂ ವಾಸ್ತವದಲ್ಲಿ ಈ ಯೋಜನೆಗಳು ಗ್ರಾಮೀಣ ಜನರ ಆಶೋತ್ತರಗಳನ್ನು ಸರಿಯಾಗಿ ಪ್ರತಿಬಿಂಬಿಸುತ್ತವೆ ಎಂದು ಹೇಳುವುದಕ್ಕೆ ಧೈರ್ಯ ಸಾಲದು. ಜನರ ಕನಿಷ್ಟ ಆವಶ್ಯಕತೆ ಗಳನ್ನು ಅವು ಇನ್ನೂ ಗಣನೆಗೆ ತೆಗೆದುಕೊಂಡಿಲ್ಲ ಎಂದರೆ ತಪ್ಪಾ ಗಲಿಕ್ಕಿಲ್ಲ.

೫. ಭಾರತೀಯ ಗ್ರಾಮದ ಭವಿಷ್ಯ

ಸಮಸ್ಯೆಗಳಿಂದ ತುಂಬಿಕೊಂಡಿರುವ ಭಾರತೀಯ ಗ್ರಾಮದ ಭವಿಷ್ಯವೇನು ? ಅದು ಸಾಂಪ್ರದಾಯಿಕ ಸಹಕಾರ, ಪರಸ್ಪರಾವಲಬಂನೆ ಮುಂತಾದ ಭಾವನೆಗಳನ್ನು ಉಳಿಸಿಕೊಳ್ಳ ಬಲ್ಲುದೆ ? ಸಾಂಪ್ರದಾಯಿಕ ಕುಟುಂಬ ಹಾಗೂ ಜಾತಿ ಪದ್ಧತಿ

ಗಳನ್ನು ಉಳಿಸಿಕೊಳ್ಳಬಲ್ಲುದೆ ? ಗ್ರಾಮೀಣಬಡತನ ಹಾಗೂ ಶೋಷಣೆಗಳನ್ನು ಮುಂದಿನ ಕೆಲವು ವರ್ಷಗಳಲ್ಲಿ ಗೌಜುಗದ್ದಲ ಗಳಿಲ್ಲದೇ ಶಾಂತಯುತವಾಗಿ ನಿರ್ಮೂಲನ ಮಾಡಬಹುದೆ? ಗ್ರಾಮ ಮತ್ತು ನಗರಗಳ ಅಂತರಗಳು ಮಾಯವಾಗಿ ಹೋಗ ಬಹುದೆ ? ಈ ಎಲ್ಲ ಪ್ರಶ್ನೆಗಳಿಗೆ ಉತ್ತರಿಸುವುದು ಸುಲಭದ ಮಾತಲ್ಲ. ಆದರೂ ಈ ನಾಡಿನ ಭವಿತವ್ಯದ ದೃಷ್ಟಿಯಿಂದ ಇಂಥ ಪ್ರಶ್ನೆಗಳನ್ನು ಉತ್ತರಿಸಲು ಯತ್ನಮಾಡಲೇ ಬೇಕು.

ನಮ್ಮ ಸಾಂಪ್ರದಾಯಿಕ ಸಹಕಾರ ಪರಸ್ಪರಾವಲಂಬ ನೆಯ ಭಾವನೆಗಳೂ ಪದ್ಧತಿಗಳೂ ಮತ್ತಿಷ್ಟು ಶಿಥಿಲವಾಗುವ ಚಿಹ್ನೆಗಳಿವೆ. ಜಾತಿ ಭಾವನೆಗಳು ಇನ್ನೂ ಬಲಿಷ್ಠವಾಗಿದ್ದರೂ ಜಾತಿ ಧರ್ಮಗಳಿಗೆ ಮೀರಿದ ರೈತ ಚಳುವಳಿಗಳು, ನಕ್ಸಲೀಯರ ಘರ್ಷಣೆ ಇವೆಲ್ಲ ಬಲಗೊಳ್ಳುತ್ತಿವೆ. ಇವು ವರ್ಗಸಂಘರ್ಷದ ಪ್ರಾರಂಭವನ್ನು ಸೂಚಿಸುತ್ತವೆ. ಬರುವ ವರ್ಷಗಳಲ್ಲಿ ವರ್ಗ ಸಂಘರ್ಷ ಹೆಚ್ಚು ತೀವ್ರವಾಗುತ್ತ ಹೋಗಬಹುದು. ಗ್ರಾಮೀಣ ಬಡತನ ಹಾಗೂ ಶೋಷಣೆಗಳನ್ನು ಪೂರ್ಣ ಶಾಂತಿಯುತವಾಗಿ ನಿರ್ಮೂಲನಗೊಳಿಸುವುದು ಸಾಧ್ಯವಾಗಲಿಕ್ಕಿಲ್ಲ. ಆಳುವ ಸರ ಕಾರಗಳು ಇನ್ನು ಮುಂದೆ ಹಿಂದೆಂದಿಗಿಂತಲೂ ಹೆಚ್ಚು ಸಮತಾ ವಾದಿ ಧೋರಣೆಗಳನ್ನು ತಳೆಯುವುದು ಅನಿವಾರ್ಯವಾಗ ಬಹುದು. ಭೂಸುಧಾರಣಾಕಾರ್ಯಕ್ರಮಗಳು ಇನ್ನೂ ಹೆಚ್ಚು ಕಟ್ಟುನಿಟ್ಟಾಗಿ ಜಾರಿಗೆ ಬರಬಹುದು. ಗ್ರಾಮೀಣ ಬಡ ಜನರಿ,ಗೆ

ಅದರಲ್ಲೂ ಹಿಂದುಳಿದ ಜನಾಂಗಗಳಿಗೆ, ಮತ್ತಷ್ಟು ಸವಲತ್ತು ಗಳು ಸಿಗಬಹುದು. ನಗರೀಕರಣವು ನಿಶ್ಚಯವಾಗಿಯೂ ಗ್ರಾಮೀಣ ಪ್ರದೇಶಗಳ ಮೇಲೆ ಮತ್ತಷ್ಟು ಪ್ರಭಾವ ಬೀರುವ ಸಾಧ್ಯತೆ ಇದೆ.

ಪಾಶ್ಚಿಮಾತ್ಯ ಜಗತ್ತಿನ ಗ್ರಾಮಗಳು ಆಮೂಲಾಗ್ರವಾಗಿ ಬದಲಾಗಿ, ಗ್ರಾಮ ಮತ್ತು ನಗರಗಳ ಅಂತರ ಮಾಯವಾಗಿ ಹಳೆಯ ಮಾದರಿಯ ಗ್ರಾಮಗಳು ಹೇಳಹೆಸರಿಲ್ಲವಾಗುತ್ತವೆ ಯೆಂದು ಅನೇಕ ವಿದ್ವಾಂಸರು ಗುರುತಿಸಿದ್ದಾರೆ, ಇದನ್ನೆ 'ಗ್ರಾಮೀಣ ಕ್ರಾಂತಿ' ಎಂದು ಕರೆಯುವುದಿದೆ. ಈ ಅರ್ಥದಲ್ಲಿ ಭಾರತದಲ್ಲಿಯೂ ಗ್ರಾಮೀಣಕ್ರಾಂತಿಯ ಬೀಜಗಳು ಬಿತ್ತಲ್ಪಟ್ಟಿವೆ. ಆದರೆ ಆಧುನಿಕತೆಯು, ಯಂತ್ರತಂತ್ರದ ಪಾಶ್ಚಿಮಾತ್ಯ ಸಂಸ್ಕೃತಿಯ ಹಾಗೂ ನಗರೀಕರಣದ • ಬುಲ್ಡೋಜರುಗಳು ಭಾರತದಲ್ಲಿ ನಗರ-ಗ್ರಾಮ ಭೇದಗಳನ್ನೆಲ್ಲ ಅಳಿಸಿಹಾಕಿ• ಭಾರತೀಯ ಗ್ರಾಮಗಳನ್ನು ನೆಲಸಮ ಮಾಡುತ್ತವೆ ಎಂಬ ಹೆದರಿಕೆ ಸದ್ಯಕ್ಕಂತೂ ಇಲ್ಲ. ಆದರೂ ಬದಲಾಗುತ್ತಿರುವ ಭಾರತೀಯ ಗ್ರಾಮವು ಗೊಂದಲ ಹಾಗೂ ಕಳವಳದ ಸ್ಥಿತಿ ಯಲ್ಲಿದೆ.

ಗ್ರಂಥ ಋಣ

Darling, Sir M : The Punjab Peasant in Prosperity and Debt.
(Introd. by Dewey Delhi, Manohar Book 1977)

Dasgupta, Biplab (Ed) : Village Studies in the Third World
(New Delhi, Hindustan Pub. 1978)

Dhanagare, D. N. ; Agrarian Movements and Gandhian Politics
(Agra, Agra University 1975)

Dube, S.C. (Ed) ; India Since Independence
(New Delhi, Vikas 1977)

Ensminger, D : Rural India in Transition (New Delhi, 1972)

Epstein, Scarlett &
Penny, D.H. : Opportunity and Response (New york, Humanities Press, 1973)

Epstin, Scarlet : South India- Yesterday, Today and Tomorrow (New York, Macmillan, 1973)

Gudeman, Stephen ; Demise of a Rural Economy (London, R & K. Paul,1977)

Haswell, M.R. : The Economic Development of Village India (London, 1967

Mandelbaum, D.G : Society in India (Bombay, Popular 1976

Nanjundappa, D.M. : Development with Justice, (New Delhi 1 B H, 1976

Punit, A.E : Social Systems in Ruarl India (Delhi, Sterling, 1977)

Singer, Milton ; When a Great Tradition Modernises (Delhi, 1972)

Singh Yogendra ; The modernization of Indian Tradition (Delhi, Thomson Press, 1973)

Srinivas, M.N ; Dimensions of Social Change in India (Bombay, Popular, 1977)

ಉಪನ್ಯಾಸ ಗ್ರಂಥ ಮಾಲೆಯ ಕೆಲವು ಉಪಯುಕ್ತ ಪ್ರಕಟನೆಗಳು

೧. ಭಾರತದಲ್ಲಿ ಜಾತಿ ಪದ್ಧತಿ —ವ್ಹಿ. ಎಸ್. ಡಿಸೋಜಾ

೨. ಮೂಢ ನಂಬಿಕೆಗಳು —ಎಲ್. ಆರ್. ಹೆಗಡೆ

೩. ಪ್ರಾಚೀನ ಭಾರತದಲ್ಲಿ ಸಾಮಾಜಿಕ ಜನಜೀವನ —ಸಿ. ವ್ಹಿ. ರಂಗಸ್ವಾಮಿ

೪. ಗ್ರಾಮಾಭ್ಯುದಯದ ಯೋಜನಾಂಗಗಳು —ಟಿ.ಕೆ. ಮೇಟಿ

೫. ಹಳ್ಳಿಗರೇಳ್ಗೆ ಸಾಧಿಸುವ ಬಗೆ —ಬಿ. ಆರ್. ಪಾಟೀಲ

೬. ಸಾಮಾಜಿಕ ಭದ್ರತೆ —ಎಚ್. ವಿ. ನಾಗೇಶ್

೭. ಹಳ್ಳಿಗಳ ಆರ್ಥಿಕ ಅಭಿವೃದ್ಧಿ —ಎಸ್. ಜಿ. ಕುಲಕರ್ಣಿ

೮. ಬದಲಾಗುತ್ತಿರುವ ಭಾರತೀಯ ಕುಟುಂಬ —ಎಚ್. ವಿ. ನಾಗೇಶ್

೯. ಸಾಮಾಜಿಕ ಬದಲಾವಣೆ ಮತ್ತು ಪ್ರಗತಿ —ಕೆ.ಜಿ.ಜೋಶಿ

೧೦. ನಮ್ಮ ದೇಶದಲ್ಲಿ ಬಡತನ ಹಾಗು ಅದರ ನಿವಾರಣೆ —ಎಂ. ಸಿ. ಕೊಡ್ಲಿ

ಪ್ರಸಾರಾಂಗ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ